# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು–570006

**ದಿನಾಂಕ: 13.06.2023ರಂದು ಪೂರ್ವಾಹ್ನ 11.00** ಗಂಟೆಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರಿನಲ್ಲಿ, ಮಾನ್ಯ ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆ ರವರ ಅಧ್ಯಕ್ಷತೆಯಲ್ಲಿ ನಡೆದ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯ **172ನೇ** ಸಾಮಾನ್ಯ ಸಭೆಯ ನಡವಳಿ.

| **ಉಪಸ್ಥಿತರು** | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು | **ಪ್ರೊ ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು |
| **ಪ್ರೊ ಲಕ್ಷ್ಮಿ ಎನ್**<br>ಡೀನ್ (ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ ಮೈಸೂರು | **ಶ್ರೀಮತಿ ಉಮಾ.ಕೆ**<br>ಉಪಕಾರ್ಯದರ್ಶಿ<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001 |
| **ಶ್ರೀ ನಂದಕುಮಾರ್ ಬಿ**<br>ಉಪಕಾರ್ಯದರ್ಶಿ<br>ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ), ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಸದಸ್ಯರು<br>ಬೆಂಗಳೂರು – 560 001 | |
| **ಅನುಪಸ್ಥಿತರು** | |
| **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ, ಮೈಸೂರು ಜಿಲ್ಲೆ | |

ಕುಲಸಚಿವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

ಮಾನ್ಯ ಕುಲಪತಿಗಳು ಮಾತನಾಡಿ, ವಿಷಯಸೂಚಿ ಪ್ರಕಾರ 172ನೇ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಲು ಕುಲಸಚಿವರಿಗೆ ಸೂಚಿಸಿದರು. ನಂತರ, ಕುಲಸಚಿವರು 172ನೇ ವ್ಯವಸ್ಥಾಪನಾ ಮಂಡಳಿಯ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಪ್ರಸ್ತಾಪಿಸಿದರು.

*******

ಕುಲಪತಿಗಳು ಕುಲಸಚಿವರು

**ವಿಷಯ ಸಂಖ್ಯೆ : 172.01**

ಅ) ದಿನಾಂಕ: 18.03.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 171ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸುವ ಬಗ್ಗೆ.

ಆ) ದಿನಾಂಕ: 18.03.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 171ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿ ಬಗ್ಗೆ.

********

ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು ಇವರು ಮಾತನಾಡುತ್ತಾ, ವಿಷಯ ಸಂಖ್ಯೆ 172.01(ಆ) ನಲ್ಲಿನ ಪುಟ ಸಂಖ್ಯೆ 08 ರ ವಿಚಾರವಾಗಿ ಕೆಸಿಎಸ್ ವಿಚಾರವಾಗಿ ನೇಮಕಾತಿ ಆಗಿರುವ ಬಗ್ಗೆ ಚರ್ಚಿಸಿದರು.

ಈ ವಿಚಾರವಾಗಿ ಕುಲಸಚಿವರು ಮಾತನಾಡಿ, ಸದರಿ ವಿಚಾರವಾಗಿ 2007 ರಲ್ಲಿ ನೇರ ನೇಮಕಾತಿಯಾಗಿರುವುದಾಗಿ ಹಾಗು ನೇಮಕಾತಿ ಪ್ರಕ್ರಿಯೆಯನ್ನು ಸರ್ಕಾರದಿಂದ ಅನುಮೋದನೆ ಪಡೆದು ನಡೆಸಿರುವುದಾಗಿ ತಿಳಿಸಿದರು. 371 ಜೆ ನಲ್ಲಿ ಹುದ್ದೆಗಳು ಭರ್ತಿ ಆಗಿರುವುದಿಲ್ಲ ಮತ್ತು ಖಾಲಿ ಇರುವುದಾಗಿ ಸಭೆಗೆ ತಿಳಿಸಿದರು.

ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಮಾತನಾಡುತ್ತಾ, ನೇರ ನೇಮಕಾತಿ ಮಾಡಿಕೊಂಡಿರುವುದು ಸರಿಯಷ್ಟೆ, ಆದರೆ ಇದಕ್ಕೆ ಒಎಮ್ ಮಾಡಿಕೊಳ್ಳಬೇಕಾಗಿರುತ್ತದೆ. ಈ ಹಂತದಲ್ಲಿ ನೇಮಕಾತಿ ಮಾಡಿಲ್ಲವಾದ್ದರಿಂದ ಶೇ 70% ರಷ್ಟು ಭರ್ತಿ ಮಾಡಿಕೊಳ್ಳಬಹುದೆಂದು ತಿಳಿಸಿದರು.

ನೇಮಕಾತಿ ಪ್ರಕ್ರಿಯೆಯನ್ನು ಕರೆ ಮಾಡಿ ಭರ್ತಿ ಮಾಡಿಕೊಳ್ಳಲು ಹಾಗು ಇದಕ್ಕೆ ಮತ್ತೊಮ್ಮೆ ಹಣಕಾಸು ಇಲಾಖೆಯಿಂದ ಅನುಮೋದನೆ ಪಡೆಯುವ ಅವಶ್ಯಕತೆಯಿಲ್ಲವೆಂದು ತಿಳಿಸಿ, ಉನ್ನತ ಶಿಕ್ಷಣ ಇಲಾಖೆಯಿಂದ ಅನುಮೋದನೆ ಪಡೆದುಕೊಂಡು ನಂತರ ನೇಮಕಾತಿ ಪ್ರಕ್ರಿಯೆಯನ್ನು ನಡೆಸಲು ಸಲಹೆ ನೀಡಿದರು.

********

**ಅ) ದಿನಾಂಕ: 18.03.2023 ನಡೆದ ವ್ಯವಸ್ಥಾಪನಾ ಮಂಡಳಿಯ 171ನೇ ಸಾಮಾನ್ಯ ಸಭೆಯ ನಡವಳಿಯನ್ನು ಸ್ಥಿರೀಕರಿಸಲಾಯಿತು.**

**ಆ) ದಿನಾಂಕ: 18.03.2023ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 171ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.**

********

**ಕುಲಪತಿಗಳು** **ಕುಲಸಚಿವರು**

## <u>ವಿಷಯ ಸಂಖ್ಯೆ: 172.02</u>

**ವಿಷಯ:-** ದಿವಂಗತ ಶ್ರೀ ಎಸ್.ಎ.ಶಶಿಕುಮಾರ್, ಸಹಾಯಕ ಅಭಿಯಂತರರು (ಎಲೆಕ್ಟ್ರಿಕಲ್) ಇಂಜಿನಿಯರಿಂಗ್ ವಿಭಾಗ, ಇವರ ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿ ಕುರಿತು.

*-*-*-*

ದಿವಂಗತ ಶ್ರೀ. ಎಸ್.ಎ.ಶಶಿಕುಮಾರ್, ಸಹಾಯಕ ಅಭಿಯಂತರರು (ಎಲೆಕ್ಟ್ರಿಕಲ್), ಇಂಜಿನಿಯರಿಂಗ್ ವಿಭಾಗ, ಇವರು ಕರಾಮುವಿಯಲ್ಲಿ ಕಾರ್ಯ ನಿರ್ವಹಿಸಿದ್ದು, ಸದರಿಯವರು ಅನಾರೋಗ್ಯಕ್ಕೆ ತುತ್ತಾಗಿ ಜೆ.ಎಸ್.ಎಸ್ ಆಸ್ಪತ್ರೆ, ಮೈಸೂರಿನಲ್ಲಿ ಒಳರೋಗಿ ದಾಖಲಾಗಿ ನಂತರ ಶಸ್ತ್ರ ಚಿಕಿತ್ಸೆಗೆ ಒಳಗಾಗಿ ಕಿಡ್ನಿ ವೈಫಲ್ಯದಿಂದ ದಿನಾಂಕ:20.01.2023 ರಂದು ನಿಧನ ಹೊಂದಿರುತ್ತಾರೆ. ಸದರಿಯವರ ಪತ್ನಿಯಾದ ಶ್ರೀಮತಿ ಶಶಿರೇಖಾ.ಡಿ ಇವರು ತಮ್ಮ ಪತಿಯ ವೈದ್ಯಕೀಯ ಹುಂಡಿಯ ವೆಚ್ಚದ ಮರುಭರಿಕೆಗೆ ಸಂಬಂಧ ಮನವಿ ಪತ್ರವನ್ನು ಸಲ್ಲಿಸಿ ಮರುಭರಿಕೆಯ ವೆಚ್ಚ ರೂ. 4,47,893/-ಗಳನ್ನು ನನ್ನ ಹೆಸರಿಗೆ ಪಾವತಿಸುವಂತೆ ಮನವಿ ಮಾಡಿಕೊಂಡಿರುತ್ತಾರೆ.

ಸದರಿ ಹುಂಡಿಗಳನ್ನು KMAR ನಿಯಮ 1963ರ ಪ್ರಕಾರ CGHS ಬೆಂಗಳೂರು ದರಗಳ ಅನ್ವಯ ಪರಿಶೀಲಸಿದ ನಂತರ ಪಾವತಿಸಬೇಕಾಗಿರುವ ಒಟ್ಟು ಮೊತ್ತ ರೂ. **2,59,855/-**ಗಳಾಗಿರುತ್ತದೆ.

ವಿವಿ ನಿಲಯದ ಪರಿನಿಯಮ 23(3)ರಲ್ಲಿ, ವೈದ್ಯಕೀಯ ಮರುಭರಿಕೆ ವೆಚ್ಚವು ಪ್ರತಿ ನೌಕರನಿಗೆ ಒಂದು ಆರ್ಥಿಕ ವರ್ಷದಲ್ಲಿ ರೂ. 1 ಲಕ್ಷ ಮೀರಬಾರದು ಎಂದಿರುತ್ತದೆ. ಹಾಗೆಯೇ, 23(5)ರಲ್ಲಿ ಒಂದು ಆರ್ಥಿಕ ವರ್ಷದಲ್ಲಿ ವೈದ್ಯಕೀಯ ವೆಚ್ಚವು 1 ಲಕ್ಷ ಮೀರಿದ ಸಂದರ್ಭದಲ್ಲಿ ಮಾನ್ಯ ಕುಲಪತಿಗಳ ತೀರ್ಮಾನವನ್ನಾಧರಿಸಿ ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಬಹುದು ಎಂದಿರುತ್ತದೆ ಈ ಸಂಬಂಧವಾಗಿ ಸದರಿಯವರಿಗೆ ಮೇಲ್ಕಂಡ ವೈದ್ಯಕೀಯ ವೆಚ್ಚದ ಮರುಭರಿಕೆ ಮೊತ್ತ ರೂ. **2,59,855/-**ಗಳನ್ನು ಪಾವತಿಸುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

*-*-*-*

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ದಿವಂಗತ ಶ್ರೀ ಶಶಿಕುಮಾರ್, ಸಹಾಯಕ ಅಭಿಯಂತರರು (ಎಲೆಕ್ಟ್ರಿಕಲ್), ಇಂಜಿನಿಯರಿಂಗ್ ವಿಭಾಗ ಇವರ ವೈದ್ಯಕೀಯ ವೆಚ್ಚದ ಮರುಭರಿಕೆಯ ಹುಂಡಿಯನ್ನು ವಿಷಯ ಮಂಡನೆಯ ಜೊತೆ ಲಗತ್ತಿಸಿರುವ ದಾಖಲಾತಿಗಳೊಂದಿಗೆ ಪರಿಶೀಲಿಸಿ ಮರುಭರಿಕೆ ಮಾಡಬಹುದು ಎಂದು ತಿಳಿಸಿದರು.

ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಇದರ ಬಗ್ಗೆ ಮತ್ತೊಂದು ಬಾರಿ ಪರಿಶೀಲಿಸಿ ವೈದ್ಯಕೀಯ ವೆಚ್ಚದ ಮರುಭರಿಕೆಯ ಬಗ್ಗೆ ಮುಂದಿನ ಕ್ರಮಕೈಗೊಳ್ಳುವುದಾಗಿ ಸಲಹೆ ನೀಡಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ದಿವಂಗತ ಶ್ರೀ ಶಶಿಕುಮಾರ್, ಸಹಾಯಕ ಅಭಿಯಂತರರು (ಎಲೆಕ್ಟ್ರಿಕಲ್), ಇಂಜಿನಿಯರಿಂಗ್ ವಿಭಾಗ ಇವರ ವೈದ್ಯಕೀಯ ವೆಚ್ಚದ ಮರುಭರಿಕೆಯ ಹುಂಡಿಯನ್ನು ಕುರಿತು ಪುನರ್ ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳುವಂತೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

ಕುಲಪತಿಗಳು ಕುಲಸಚಿವರು

**ವಿಷಯ ಸಂಖ್ಯೆ: 172.03**

**ವಿಷಯ**: ವಿಶ್ವ ವಿದ್ಯಾನಿಲಯಕ್ಕೆ ಅವಶ್ಯವಿರುವ ಲೇಖನ ಸಾಮಗ್ರಿ ಮತ್ತು ಕಾಟ್ರಿಡ್ಜ್/ಟೋನರ್ಸ್‌ಗಳನ್ನು ಖರೀದಿಸಲು ಆಹ್ವಾನಿಸಲಾಗಿದ್ದ ಟೆಂಡರ್‌ನಲ್ಲಿ ಅರ್ಹ ಟೆಂಡರ್‌ದಾರರನ್ನು ಅಂತಿಮಗೊಳಿಸುವ ಬಗೆಗೆ.

******

ವಿಶ್ವ ವಿದ್ಯಾನಿಲಯಕ್ಕೆ ಅವಶ್ಯವಿರುವ ಲೇಖನ ಸಾಮಗ್ರಿ ಮತ್ತು ಕಾಟ್ರಿಡ್ಜ್/ ಟೋನರ್ಸ್‌ಗಳನ್ನು ಖರೀದಿಸುವ ಸಂಬಂಧ ಕೆ.ಟಿ.ಪಿ.ಪಿ ಕಾಯ್ದೆ/ನಿಯಮಗಳನ್ವಯ ದಿನಾಂಕ: 27.02.2023 ರ ಅಧಿಸೂಚನೆಯ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿತ್ತು.

ಸದರಿ ಟೆಂಡರ್‌ನಲ್ಲಿ 08(ಎಂಟು) ಸಂಸ್ಥೆಯವರು ಬಿಡ್ ಸಲ್ಲಿಸಿದ್ದರು. ಟೆಂಡರ್ ಅನ್ನು ಅಂತಿಮಗೊಳಿಸುವ ಸಂಬಂಧ ರಚಿಸಲಾಗಿದ್ದ Tender Evaluation Committee ಯು ದಿನಾಂಕ: 26.04.2023 ರಂದು ನಡೆದ ಸಭೆಯಲ್ಲಿ ತಾಂತ್ರಿಕ ಬಿಡ್ ದಾಖಲೆಗಳನ್ನು ಪರಿಶೀಲಿಸಿ, 1. Gami Paresh Naran(M/s. Sai Office Suppliers, Bangalore), 2.Keshava Reddy.N, (M/s. District Supply and Marketing Co-Op Society Ltd, Bangalore), 4. Mukund Soumya ( M/s. Sumukha Office Solutions, Mysuru), 8.Rajesh Seetharama (M/s. Shrinidhi Computers Pvt Ltd, Mangalore) ಈ ನಾಲ್ಕು ಸಂಸ್ಥೆಗಳು ಸಲ್ಲಿಸಿರುವ ಬಿಡ್ ದಾಖಲೆಗಳು ಸಮರ್ಪಕವಾಗಿದ್ದರಿಂದ ಇವರ ಬಿಡ್‌ಗಳನ್ನು ಸಭೆಯು ಅಂಗೀಕರಿಸಿ ಈ ಸಂಸ್ಥೆಗಳ ಆರ್ಥಿಕ ಬಿಡ್ ತೆರೆಯಲು ಸಭೆಯು ಒಪ್ಪಿಗೆ ಸೂಚಿಸಿ ಶಿಫಾರಸ್ಸು ಮಾಡಿತ್ತು.

ಉಳಿದಂತೆ, 3. Kirthi Patel (M/s. Ascar Office Solution, Bangalore),5. N.G.Girish (M/s.Pushpak Agencies, Mysuru),6. Prabhu Mandan Dhadhi (M/s. Bahuchar Traders, Mumbai),7. Praveen Kumar R.L (M/s. RSP Enterprises, Davanagere)ಈ ನಾಲ್ಕು ಸಂಸ್ಥೆಯವರು ಟೆಂಡರ್‌ನಲ್ಲಿ ಕೋರಿರುವ ದಾಖಲಾತಿಗಳನ್ನು ಸಮರ್ಪಕವಾಗಿ ಸಲ್ಲಿಸದ ಕಾರಣ ಇವರುಗಳ ತಾಂತ್ರಿಕ ಬಿಡ್ ಅನ್ನು ತಿರಸ್ಕರಿಸಿ ಶಿಫಾರಸ್ಸು ಮಾಡಿರುತ್ತಾರೆ. ದಿನಾಂಕ: 20.05.2023 ಮತ್ತು 25.05.2023 ರಂದು ನಡೆದ ಸಭೆಯಲ್ಲಿ ಆರ್ಥಿಕ ಬಿಡ್‌ಗೆ ಅರ್ಹತೆ ಹೊಂದಿದಂತಹ ನಾಲ್ಕು ಸಂಸ್ಥೆಯವರು ಸಲ್ಲಿಸಿದ್ದ ಆರ್ಥಿಕ ಬಿಡ್‌ನ ದರಗಳನ್ನು ಪರಿಶೀಲಿಸಿದ ಸಂದರ್ಭದಲ್ಲಿ ಟೆಂಡರ್‌ನ ಅಧಿಸೂಚನೆಯ General Terms and Conditions for eligible tender ನ ಕ್ರಮ ಸಂಖ್ಯೆ: 27ರ **(** Overall lowest rates will be considered for award of contract.**)** ಷರತ್ತಿನಂತೆ ಒಟ್ಟಾರೆ ಕನಿಷ್ಠ ದರವನ್ನು ನಮೂದಿಸಿದ್ದ Mukund Soumya (M/s. Sumukha Office Solutions, Mysuru) ಸದರಿ ಸಂಸ್ಥೆಯನ್ನು ಎಲ್-1 ಬಿಡ್‌ದಾರರನ್ನಾಗಿ ಪರಿಗಣಿಸಲು ತೀರ್ಮಾನಿಸಲಾಯಿತು ಮತ್ತು ಮಾರುಕಟ್ಟೆ ದರಗಳೊಂದಿಗೆ ಎಲ್-1 ದರಗಳನ್ನು ಪರಿಶೀಲಿಸಿ ಸದರಿ ಸಂಸ್ಥೆಯೊಂದಿಗೆ ಒಟ್ಟು 104 ಲೇಖನ ಸಾಮಗ್ರಿ ಮತ್ತು ಕಾಟ್ರಿಡ್ಜ್/ಟೋನರ್ಸ್‌ಗಳಿಗೂ ದರ ಸಂಧಾನ ನಡೆಸಿ ಎಲ್-1 ದರಗಳನ್ನು ಅಂತಿಮಗೊಳಿಸಲಾಗಿರುತ್ತದೆ.

**ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಟೆಂಡರ್ ಮೌಲ್ಯಮಾಪನಾ ಸಮಿತಿಯು ಟೆಂಡರನ್ನು ಅಂತಿಮಗೊಳಿಸಿರುವ ಕ್ರಮಕ್ಕೆ, ಅರ್ಹತೆ ಪಡೆದ ಎಲ್-1 ಬಿಡ್‌ದಾರರಾದ M/s. Sumukha Office Solutions, Mysuru ಇವರೊಂದಿಗೆ ದರ ಕರಾರು ಒಪ್ಪಂದ ಮಾಡಿಕೊಂಡು ಅಗತ್ಯ ಲೇಖನ ಸಾಮಗ್ರಿ/ಉತ್ಪನ್ನಗಳನ್ನು ಬೇಡಿಕೆ ಅನುಸಾರ ಎಲ್-1 ದರಗಳಲ್ಲಿ ಖರೀದಿಸುವ ಸಂಬಂಧ ಅನುಮೋದನೆಗಾಗಿ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ.**

*********

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಅವಶ್ಯಕವಿರುವ ಲೇಖನ ಸಾಮಗ್ರಿ, ಕಾಟ್ರಿಡ್ಜ್/ ಟೋನರ್‌ಗಳನ್ನು ಖರೀದಿಸಲು ಮತ್ತು ಟೆಂಡರ್ ದಾರರನ್ನು ಆಹ್ವಾನಿಸಿದ್ದ ಬಗ್ಗೆ ತಿಳಿಸಿದರು.

**ಕುಲಪತಿಗಳು** **ಕುಲಸಚಿವರು**

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಟೆಂಡರ್ ಪ್ರಕ್ರಿಯೆಯ ಒಟ್ಟು ವೆಚ್ಚದ ಬಗ್ಗೆ ಚರ್ಚಿಸಿದರು.

ಕುಲಸಚಿವರು ಮಾತನಾಡಿ, ಟೆಂಡರ್ ಕರೆ ಮಾಡುವ ಪ್ರಕ್ರಿಯೆಯಲ್ಲಿ ಹಣಕಾಸಿನ ಬಗ್ಗೆ ಉಲ್ಲೇಖಿಸಿರುವುದಿಲ್ಲ ಆದರೆ ಆಹ್ವಾನಿಸಿದ್ದ ಟೆಂಡರ್ ನಲ್ಲಿ ಅರ್ಹ ಟೆಂಡರ್ ದಾರರಲ್ಲಿ M/s. Sumukha Office Solutions, Mysuru ಇವರು ಅರ್ಹರಿರುವ ಬಗ್ಗೆ ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, technical committee ಬಗ್ಗೆ ಮಾಹಿತಿ ಪಡೆದುಕೊಂಡು comparision statement ಅನ್ನು ತಯಾರಿಸಿ, rate negotiation ಮಾಡುವಂತೆ ಸೂಚಿಸಿದರು.

ಕುಲಸಚಿವರು ಮಾತನಾಡಿ, ಟೆಂಡರ್ ಪ್ರಕ್ರಿಯೆಯನ್ನು ಕ್ರಮಬದ್ಧವಾಗಿಯೇ ನಡೆಸಿರುವುದಾಗಿ ತಿಳಿಸಿದರು.

*******

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯಕ್ಕೆ ಅವಶ್ಯಕವಿರುವ ಲೇಖನ ಸಾಮಗ್ರಿ, ಮತ್ತು ಕಾಟ್ರಿಡ್ಜ್/ ಟೋನರ್‌ಗಳನ್ನು ಟೆಂಡರ್ ಮೌಲ್ಯಮಾಪನಾ ಸಮಿತಿಯ ಅಂತಿಮಗೊಳಿಸಿರುವ ಎಲ್-1 ಬಿಡ್‌ದಾರರಾದ M/s. Sumukha Office Solutions, Mysuru ಇವರೊಂದಿಗೆ ದರ ಕರಾರು ಒಪ್ಪಂದ ಮಾಡಿಕೊಂಡು ಅಗತ್ಯ ಲೇಖನ/ಉತ್ಪನ್ನಗಳನ್ನು ಬೇಡಿಕೆ ಅನುಸಾರ ಎಲ್-1 ದರಗಳಲ್ಲಿ ಖರೀದಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

******

## ವಿಷಯ ಸಂಖ್ಯೆ: 172.04

**ವಿಷಯ: 26ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು ಅನುಮೋದಿಸುವ ಬಗ್ಗೆ.**

*********

ದಿನಾಂಕ: 08.06.2023 ರಂದು ನಡೆದ 26ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು, ದಿನಾಂಕ: 13.06.2023 ರಂದು ನಡೆಯಲಿರುವ 172ನೇ ವ್ಯವಸ್ಥಾಪನಾ ಮಂಡಳಿಯ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

*******

ಕುಲಪತಿಗಳು ಕುಲಸಚಿವರು

ಕುಲಸಚಿವರು ಮಾತನಾಡಿ, ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯ ಬಗ್ಗೆ ಡೀನ್(ಶೈಕ್ಷಣಿಕ) ರವರಿಗೆ ಸಂಕ್ಷಿಪ್ತವಾಗಿ ಸಭೆಗೆ ವಿವರಿಸಲು ತಿಳಿಸಿದರು.

ಡೀನ್(ಶೈಕ್ಷಣಿಕ) ರವರು ಮಾತನಾಡಿ, ಶೈಕ್ಷಣಿಕ ಮಂಡಳಿ ಸಭೆಯ ವಿಷಯ ಸಂಖ್ಯೆ 26.02 ರ ಬಗ್ಗೆ ಪಿಹೆಚ್.ಡಿ ಕಾರ್ಯಕ್ರಮಗಳಿಗೆ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ಖಾಲಿ ಇರುವ ಸೀಟುಗಳಿಗೆ ಪ್ರವೇಶಾತಿಯನ್ನು ಪಡೆಯುವುದರ ಬಗ್ಗೆ ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಎಷ್ಟು ಪ್ರಮಾಣದಲ್ಲಿ ನೀಡಲಾಗುತ್ತಿದೆ ಹಾಗು overall outer limit ನ ಬಗ್ಗೆ ಸಭೆಯಲ್ಲಿ ಚರ್ಚಿಸಿದರು.

ಡೀನ್(ಶೈಕ್ಷಣಿಕ) ರವರು ಮಾತನಾಡಿ, ಒಟ್ಟು 36 ಸೀಟುಗಳಿರುತ್ತವೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಯುಜಿಸಿ ನಿಯಮಾನುಸಾರ ಪ್ರಾಧ್ಯಾಪಕರುಗಳಿಗೆ 08 ಸೀಟುಗಳು, ಸಹ ಪ್ರಾಧ್ಯಾಪಕರುಗಳಿಗೆ 06 ಸೀಟುಗಳು, ಸಹಾಯಕ ಪ್ರಾಧ್ಯಾಪಕರುಗಳಿಗೆ 04 ಸೀಟುಗಳಿರುತ್ತದೆ ಎಂದು ತಿಳಿಸಿದರು. ಒಟ್ಟಾರೆ ಆರು ವರ್ಷಗಳಲ್ಲಿ ವಿದ್ಯಾರ್ಥಿಯು ತನ್ನ ಪಿಹೆಚ್.ಡಿ ಪದವಿಯ ವ್ಯಾಸಂಗವನ್ನು ಮುಗಿಸಿಕೊಳ್ಳಬೇಕಾಗಿರುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಪಿಹೆಚ್.ಡಿ ವಿಚಾರವಾಗಿ ಪರಿಶಿಷ್ಟ ಜಾತಿಗೆ ಮತ್ತು ಪರಿಶಿಷ್ಟ ಪಂಗಡಕ್ಕೆ ಹಾಗು ಹಿಂದುಳಿದ ವರ್ಗಕ್ಕೆ ಇರುವ ಸ್ಥಳಾವಕಾಶದ ಬಗ್ಗೆ ಸಂಕ್ಷಿಪ್ತವಾಗಿ ಸಭೆಗೆ ವಿವರಿಸಿದರು.

ಶ್ರೀ ನಂದ ಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಮಾತನಾಡಿ, overall pool ಮಾಡಿಕೊಳ್ಳುವುದರ ಬಗ್ಗೆ ಹಾಗೂ state reservation ಪಾಲನೆ ಬಗ್ಗೆ ಚರ್ಚಿಸಿದರು.

ಕುಲಸಚಿವರು ಮಾತನಾಡಿ, overall pool ಮಾಡಿಕೊಳ್ಳಲು ಸಾಧ್ಯವಿರುವುದಿಲ್ಲ, ಆದರೆ, ಪಿಹೆಚ್.ಡಿ ಪ್ರವೇಶಾತಿ ಸಂಬಂಧ ಯುಜಿಸಿ norms ಅನ್ನು ಅಳವಡಿಸಿಕೊಂಡು ಅದರಂತೆ ಪಾಲಿಸುತ್ತಿರುವುದಾಗಿ ತಿಳಿಸಿದರು.

ಕುಲಸಚಿವರು ಮಾತನಾಡಿ, ಪಿಹೆಚ್.ಡಿ guideship ಅನ್ನು ನೀಡಬೇಕಾದರೆ ಯುಜಿಸಿ norms ಅನ್ನು ಪಾಲಿಸಬೇಕಾಗುತ್ತದೆ ಎಂದು ಸಭೆಗೆ ತಿಳಿಸಿದರು.

*******

ಕುಲಪತಿಗಳು ಕುಲಸಚಿವರು

ತೀರ್ಮಾನ :

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಪಿಹೆಚ್.ಡಿ ಕಾರ್ಯಕ್ರಮಗಳಿಗೆ ವಿವಿಧ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳಲ್ಲಿ ಖಾಲಿ ಇರುವ ಸೀಟುಗಳಿಗೆ ಪ್ರವೇಶಾತಿಯನ್ನು ನೀಡಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು ಹಾಗು 26ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡವಳಿಯನ್ನು ಸಭೆಯು ಅನುಮೋದಿಸಿತು.

******

## ವಿಷಯ ಸಂಖ್ಯೆ: 172.05

**ವಿಷಯ : ವಿವಿ ನಿಲಯದ ಆವರಣದಲ್ಲಿ Student Alumni Association ಕಟ್ಟಡ ನಿರ್ಮಿಸುವ ಬಗ್ಗೆ.**

*****

ವಿವಿನಿಲಯವು ಪ್ರಾರಂಭವಾಗಿ ಸುಮಾರು 27 ವರ್ಷಗಳಾಗಿದ್ದು ಬೆಳ್ಳಿ ಹಬ್ಬದ ಆಚರಣೆ ಪ್ರಯುಕ್ತ ಹಾಗೂ ನ್ಯಾಕ್ ಮಾನ್ಯತೆ ನೀಡುವ ಸಂಬಂಧ ಸಮಿತಿ ಸದಸ್ಯರು ಬೇಟಿ ನೀಡಿದ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ವೃತಿಪರ ಹಾಗೂ ಸಾಮಾಜಿಕ ಸಂಪರ್ಕಗಳನ್ನು ಅಭಿವೃದ್ಧಿ ಪಡೆಸಲು, ಹಾಗೂ ಹಳೆಯ ವಿದ್ಯಾರ್ಥಿಗಳ ಒಗ್ಗೂಡಿಸುಲು Alumni Association ಕಟ್ಟಡ ನಿರ್ಮಾಣವಾಗಬೇಕಾಗಿದೆ ಎಂದು ಸೂಚಿಸಿರುತ್ತಾರೆ ಮುಂದುವರೆದು ವಿವಿನಿಲಯಕ್ಕೆ ಈಗಾಗಲೇ ನ್ಯಾಕ್ A+ ಶ್ರೇಣಿಯ ಮಾನ್ಯತೆ ದೊರೆತಿರುವುದರಿಂದ Alumni Association ಕಟ್ಟಡ ಅತ್ಯವಶ್ಯಕವಾಗಿರುತ್ತದೆ ಹಾಗೂ ವಿದ್ಯಾರ್ಥಿಗಳಿಗೆ ಸೆಮಿನಾರ್ ನಡೆಸಲು, ಸಭೆಯನ್ನು ಆಯೋಜಿಸಲು, ಉದ್ಯೋಗ ನಿಯೋಜನೆಯ ಚಟುವಟಿಕೆಗಳು ಮತ್ತು ಇತರೆ ಶೈಕ್ಷಣಿಕ ಚಟುವಟಿಕೆ ನಡೆಸುವ ಸಂಬಂಧ Student Alumni ಕಟ್ಟಡ ನಿರ್ಮಾಣ ಮಾಡಲು ಮಾನ್ಯ ಕುಲಪತಿಯವರು ಸೂಚಿಸಿರುತ್ತಾರೆ. ಆದ್ದರಿಂದ ಸದರಿ ಕಾಮಗಾರಿಯನ್ನು ನಿರ್ವಹಿಸಲು ಅಂದಾಜು ರೂ 350.00 ಲಕ್ಷಗಳು (GST ರಹಿತ) ವೆಚ್ಚವಾಗಬಹುದೆಂದು ಹಾಗೂ ಸದರಿ ಕೆಲಸವನ್ನು ನಿಯಾಮಾನುಸಾರ e-procurement ಮೂಲಕ tender ಆಹ್ವಾನಿಸಿ ನಿರ್ವಹಿಸಲು ಸದರಿ ವಿಷಯವನ್ನು ಘನ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

******

ಕುಲಪತಿಗಳು ಕುಲಸಚಿವರು

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಆಗಿಂದ್ದಾಗೆ ಉನ್ನತ ಸ್ಥಾನದ ಅಧಿಕಾರಿಗಳಾದ IAS ಅಧಿಕಾರಿಗಳು, IPS ಅಧಿಕಾರಿಗಳು ಹಾಗು ಇನ್ನಿತರ ಅಧಿಕಾರಿಗಳು ಅನ್ಯ ಕಾರ್ಯನಿಮಿತ್ತ ಬರುತ್ತಿದ್ದು, ವಿ.ವಿ.ಯಲ್ಲಿ ತಂಗುವುದರಿಂದ **Student Alumni Association** ಕಟ್ಟಡವನ್ನು ನಿರ್ಮಿಸಲು ಇದು ಒಳ್ಳೆಯ ಯೋಜನೆ ಎಂದು ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ವಿ.ವಿ.ನಿಲಯದಲ್ಲಿ ಕಟ್ಟಡ ನಿರ್ಮಾಣ ಸಂಬಂಧ ಸ್ಥಳಾವಕಾಶಗಳ ಬಗ್ಗೆ ಚರ್ಚಿಸಿದರು..

ಕುಲಸಚಿವರು ಮಾತನಾಡಿ, ವಿ.ವಿ.ನಿಲಯದಲ್ಲಿ ಕಟ್ಟಡವನ್ನು ನಿರ್ಮಿಸಲು ಸ್ಥಳಾವಕಾಶವಿರುವುದರ ಬಗ್ಗೆ ಮಾಹಿತಿಯನ್ನು ನೀಡಿದರು.

ಮಾನ್ಯ ಕುಲಪತಿಗಳು ಮಾತನಾಡಿ, **Student Alumni** ಯಿಂದ ಸಂಗ್ರಹಿಸಿದ ಹಣದಿಂದಲೇ ಕಟ್ಟಡವನ್ನು ನಿರ್ಮಿಸುವುದಾಗಿ ತಿಳಿಸಿದರು. ಒಂದು ವೇಳೆ ಕಟ್ಟಡ ನಿರ್ಮಿಸುವಾಗ ಬಂಡವಾಳದ (capital) ಕೊರತೆ ಬಂದಲ್ಲಿ sponsors' ಗಳಿಂದ ಪಡೆದು ಕಟ್ಟಡವನ್ನು ನಿರ್ಮಿಸುವುದಾಗಿ ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿದರು

ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಇದು ಆಡಳಿತಾತ್ಮಕ ಅನುಮೋದನೆಗೆ (administrative approval) ಇಟ್ಟಿರುವ ಪ್ರಸ್ತಾವನೆಯೇ ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಇದು ಒಂದು ಪ್ರಸ್ತಾವನೆಯಾಗಿದ್ದು, ವಿ.ವಿ. ನಿಲಯಕ್ಕೆ **Student Alumni (fund)** ಹಣವು ಬಂದಿರುವುದರಿಂದ ಇದನ್ನು ಸದುಪಯೋಗದ ಬಳಕೆಗೆ ಬಳಸುವುದಾಗಿ ಹಾಗೂ ವಿಷಯವನ್ನು ಪ್ರಸ್ತಾಪಿಸಿರುವುದಾಗಿ ತಿಳಿಸಿದರು.

ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಈ ಸಂಬಂಧ ಪರಿನಿಯಮದ ರಚನೆ ಕುರಿತು ವಿಷಯವನ್ನು ಚರ್ಚಿಸಿದರು.

**ಕುಲಪತಿಗಳು** **ಕುಲಸಚಿವರು**

ಕುಲಸಚಿವರು ಮಾತನಾಡಿ, ಇದುವರೆವಿಗೂ ಮುಕ್ತ ವಿ.ವಿ. ಯಲ್ಲಿ ವ್ಯವಸ್ಥಾಪನಾ ಮಂಡಳಿಯೇ ಸರ್ವೋಚ್ಚ ಮಂಡಳಿಯಾಗಿದ್ದು, ಸದರಿ ಮಂಡಳಿಯ ಆಡಳಿತಾತ್ಮಕ ಅನುಮೋದನೆಯನ್ನು ಪಡೆದುಕೊಂಡು ಮುಂದಿನ ಕ್ರಮವಹಿಸಲಾಗುವುದೆಂದು ಸಭೆಯಲ್ಲಿ ವಿವರಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ವಿಶ್ವವಿದ್ಯಾನಿಲಯದ ಕಾಯ್ದೆ ಅಡಿಯಲ್ಲಿ ಇದರ ಬಗ್ಗೆ ವಿವರಗಳು ಇದೆಯೇ ಎಂದು ಕೇಳಿದರು.

ಕುಲಸಚಿವರು ಮಾತನಾಡಿ, technical approval ಬಗ್ಗೆ ವಿ.ವಿ.ನಿಲಯವು ನೇಮಿಸಿರುವ ಸಮಿತಿಯಲ್ಲಿ ಇಬ್ಬರು ಇಂಜನಿಯರ್‌ಗಳು, PWD ಇಂದ ಒಬ್ಬರು, KPTCL ಇಂದ ಒಬ್ಬರು ಸದಸ್ಯರುಗಳು ಇರುತ್ತಾರೆ. ಸಮಿತಿಯ ಸದಸ್ಯರುಗಳಿಂದ estimates ಗೆ ಅನುಮೋದನೆಯನ್ನು ಪಡೆಯಲಾಗುವುದು ಹಾಗೂ ಅನುಮೋದಿತ ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗುವುದು ಎಂದು ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ PWD hand technically ಇರುವರೇ ಎಂದು ಕೇಳಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಪ್ರಸ್ತಾಪಿಸಿರುವ ಖರ್ಚುವೆಚ್ಚವನ್ನು PWD ಯ ಸದಸ್ಯರು ಅನುಮೋದಿಸುವುದರ ಬಗ್ಗೆ ಚರ್ಚಿಸಿದರು.

ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಮಾತನಾಡಿ, PWD ಯಿಂದ ಅನುಮೋದನೆ ಪಡೆಯುವುದರ ಬಗ್ಗೆ ಚರ್ಚಿಸಿದರು.

ಕುಲಸಚಿವರು ಮಾತನಾಡಿ, ಈ ಹಿಂದೆ ಈ ತರಹದ ಪ್ರಸ್ತಾವನೆಯನ್ನು PWD ಯಿಂದ ಅನುಮೋದನೆಗಾಗಿ ಕಳುಹಿಸುತ್ತಿದ್ದೆವು, ಸಮಯದ ಅಭಾವದ ಕಾರಣವನ್ನು ತಿಳಿಸಿ ವಿಶ್ವವಿದ್ಯಾನಿಲಯದ ಕೆಲಸಕಾರ್ಯಗಳನ್ನು ವಹಿಸಿಕೊಳ್ಳಲು ಸಾಧ್ಯವಾಗದ ಕಾರಣ ವಿ.ವಿ.ಯ ವ್ಯವಸ್ಥಾಪನಾ ಮಂಡಳಿಯಲ್ಲಿ ಪ್ರಸ್ತಾವನೆಯನ್ನು ಮಂಡಿಸಿ ಅನುಮೋದನೆ ಪಡೆದುಕೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಕುಲಪತಿಗಳು ಕುಲಸಚಿವರು

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, land availability ಯೋಜನೆ ಕುರಿತು ಕೇಳಿದರು.

ಕುಲಸಚಿವರು ಮಾತನಾಡಿ, ವಿ.ವಿ.ಯಲ್ಲಿ ಲಭ್ಯವಿರುವ ಜಾಗದಲ್ಲಿ ಕಟ್ಟಡವನ್ನು ನಿರ್ಮಿಸಲು ಪ್ರಸ್ತಾಪಿಸಿರುವುದಾಗಿ ತಿಳಿಸಿದರು ಇದಕ್ಕೆ ವ್ಯವಸ್ಥಾಪನಾ ಮಂಡಳಿಯ ಅನುಮೋದನೆ ಪಡೆದುಕೊಂಡು ಮುಂದುವರೆಸುವುದಾಗಿ ಸಭೆಯಲ್ಲಿ ತಿಳಿಸಿದರು.

ನಂತರ ಮಾತನಾಡಿದ ಮಾನ್ಯ ಕುಲಪತಿಗಳು ಮೊದಲು estimation ಸಿದ್ಧಪಡಿಸಿ, location ಅನ್ನು ಗುರಿತಿಸಿಕೊಂಡು ನಂತರ ವ್ಯವಸ್ಥಾಪನಾ ಮಂಡಳಿಯಲ್ಲಿ ಅನುಮೋದನೆ ಪಡೆಯಲಾಗುವುದು ಎಂದು ತಿಳಿಸಿದರು.

*******

<u>ತೀರ್ಮಾನ :</u>

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿವಿ ನಿಲಯದ ಆವರಣದಲ್ಲಿ Student Alumni Association ಕಟ್ಟಡ ನಿರ್ಮಿಸಲು ನಿಯಾಮಾನುಸಾರ e-procurement ಮೂಲಕ tender ಆಹ್ವಾನಿಸಿ ನಿರ್ವಹಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

*******

## <u>ವಿಷಯ ಸಂಖ್ಯೆ:172.06</u>

**ವಿಷಯ: ಕರಾಮುವಿಗೆ ಪ್ರಾದೇಶಿಕ ಕೇಂದ್ರಗಳನ್ನು ವಿವಿಧ ಜಿಲ್ಲೆಗಳಲ್ಲಿ ಮತ್ತು ಪ್ರಾಂತ್ಯವಾರು ಸ್ವಂತ ಕಟ್ಟಡ ನಿರ್ಮಿಸಲು ವಿವಿಧ ಪ್ರಾಧಿಕಾರಗಳಿಂದ ಸಿ.ಎ. ನಿವೇಶನ/ಜಮೀನು ಪಡೆಯುವ ವಿಷಯದ ಬಗೆಗೆ.**

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 'ಉನ್ನತ ಶಿಕ್ಷಣ ಎಲ್ಲರಿಗೂ, ಎಲ್ಲೆಡೆ' ಎಂಬ ಧ್ಯೇಯ ವಾಕ್ಯದೊಂದಿಗೆ ಮುಕ್ತ ಮತ್ತು ದೂರ ಶಿಕ್ಷಣವನ್ನು ನೀಡುತ್ತಿದೆ. ಕರಾಮುವಿಯು ಮೈಸೂರಿನಲ್ಲಿ ವಿ.ವಿ.ಯ ಕೇಂದ್ರಸ್ಥಾನ ಮತ್ತು ವಿವಿಧ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರಗಳು ಹಾಗೂ ಕಲಿಕಾ ಕೇಂದ್ರಗಳ ಮೂಲಕ ಹೀಗೆ ಮೂರು ಹಂತಗಳಲ್ಲಿ ದೂರ ಶಿಕ್ಷಣವನ್ನು ನೀಡುತ್ತಿದೆ. ಕರಾಮುವಿಯು ಇತ್ತೀಚಿಗೆ ನ್ಯಾಕ್ ಮೌಲ್ಯಮಾಪನದಲ್ಲಿ ಎ+ ಶ್ರೇಣಿಯನ್ನು ಗಳಿಸಿರುತ್ತದೆ. ಕರಾಮುವಿಯು ರಾಜ್ಯದೆಲ್ಲೆಡೆ ಮುಕ್ತ ಮತ್ತು ದೂರಶಿಕ್ಷಣವನ್ನು ಮತ್ತಷ್ಟು ಉತ್ತೇಜಿಸುವ ಉದ್ದೇಶವನ್ನು ಹೊಂದಿರುತ್ತದೆ. ಈ ಹಿನ್ನೆಲೆಯಲ್ಲಿ ಈಗಾಗಲೇ 23 ಪ್ರಾದೇಶಿಕ ಕೇಂದ್ರಗಳನ್ನು ತೆರೆದು ಕಾರ್ಯ ನಿರ್ವಹಿಸುತ್ತಿದ್ದು, ನೂತನವಾಗಿ 11 ಹೊಸ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಿದೆ. ಕರ್ನಾಟಕದಲ್ಲಿ ಪ್ರಾಂತ್ಯವಾರು ಒಟ್ಟು 34 ಪ್ರಾದೇಶಿಕ ಕೇಂದ್ರಗಳು ಸ್ಥಾಪನೆಯಾಗಿವೆ. ಕರಾಮುವಿಯು ಈಗಾಗಲೇ 16 ವಿವಿಧ ಸ್ಥಳಗಳಲ್ಲಿ ಸ್ವಂತ ನಿವೇಶನ/ಜಮೀನನ್ನು ಹೊಂದಿರುತ್ತದೆ.

**ಕುಲಪತಿಗಳು** **ಕುಲಸಚಿವರು**

ಪ್ರಸ್ತುತ, ವಿವಿಧ ಸ್ಥಳಗಳಲ್ಲಿ ವಿ.ವಿ.ಯು ಸ್ವಂತ ನಿವೇಶನ/ಜಮೀನನ್ನು ಹೊಂದಬೇಕಿದ್ದು, ಜಿಲ್ಲಾ/ಪ್ರಾಂತ್ಯವಾರು ಸ್ವಂತ ಪ್ರಾದೇಶಿಕ ಕೇಂದ್ರವನ್ನು ತೆರೆಯಲು ವಿವಿಧ ಪ್ರಾಧಿಕಾರಗಳಿಂದ ಸಿ.ಎ. ನಿವೇಶನ/ಜಮೀನನ್ನು ಪಡೆಯಲು ನಿರಂತರ ಪ್ರಯತ್ನ ನಡೆಯುತ್ತಿದ್ದು, ಈ ಸಂಬಂಧ ಮುಖ್ಯವಾಗಿ ಉತ್ತರ ಕರ್ನಾಟಕದ ಶಿಕ್ಷಣವಂಚಿತ ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ಶಿಕ್ಷಣವನ್ನು ತಲುಪಿಸುವ ಉದ್ದೇಶದಿಂದ ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟೆ, ಗದಗ, ಹಾವೇರಿ, ಕೊಪ್ಪಳ, ಕಲಬುರಗಿ, ರಾಯಚೂರು, ಬೆಳಗಾವಿ, ಬೀದರ್, ಚಿತ್ರದುರ್ಗ, ಮಡಿಕೇರಿ ಹಾಗೂ ಕರ್ನಾಟಕದ ಇನ್ನಿತರ ಜಿಲ್ಲೆಗಳಲ್ಲಿ ಸ್ವಂತ ಪ್ರಾದೇಶಿಕ ಕಟ್ಟಡವನ್ನು ನಿರ್ಮಿಸಲು ಸರ್ಕಾರದ ನಗರಾಭಿವೃದ್ಧಿ ಇಲಾಖೆಗಳು, ಕರ್ನಾಟಕ ಗೃಹ ಮಂಡಳಿ ಹಾಗೂ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ಮತ್ತು ಬೇರೆ ವಿಶ್ವವಿದ್ಯಾನಿಲಯಗಳಿಂದ ಸಿ.ಎ. ನಿವೇಶನ/ಜಮೀನನ್ನು ನಮ್ಮ ವಿ.ವಿ.ಗೆ ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ಮಂಜೂರು ಮಾಡಿಕೊಡುವ ಸಾಧ್ಯತೆಯಿರುತ್ತದೆ.

ಈ ಹಿನ್ನೆಲೆಯಲ್ಲಿ, ಮೇಲ್ಕಂಡ ಸ್ಥಳಗಳಲ್ಲಿ ಮುಕ್ತ ವಿ.ವಿ.ಯು ಜಮೀನನ್ನು ಪಡೆಯುವ ಸಂಬಂಧ, ವಿಷಯವನ್ನು ವ್ಯವಸ್ಥಾಪನಾ ಮಂಡಳಿಯ ಸಭೆಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

*******

ಮಾನ್ಯ ಕುಲಸಚಿವರು ಮಾತನಾಡಿ, ಕರಾಮುವಿಗೆ ಪ್ರಾದೇಶಿಕ ಕೇಂದ್ರಗಳನ್ನು ವಿವಿಧ ಜಿಲ್ಲೆಗಳಲ್ಲಿ ಪ್ರಾಂತ್ಯವಾರು ಸ್ವಂತ ಕಟ್ಟಡವನ್ನು ನಿರ್ಮಿಸಲು ಪ್ರಾಧಿಕಾರಗಳಿಂದ ಸಿ.ಎ. ನಿವೇಶನ/ಜಮೀನು ಪಡೆಯುವುದರ ಬಗ್ಗೆ ವಿವರಿಸುತ್ತಾ, ನಮ್ಮಲ್ಲಿ 34 ಪ್ರಾದೇಶಿಕ ಕೇಂದ್ರಗಳದ್ದು, ಇದರಲ್ಲಿ 09 ಪ್ರಾದೇಶಿಕ ಕೇಂದ್ರಗಳಲ್ಲಿ ಸ್ವಂತ ಕಟ್ಟಡಗಳಿದ್ದು, ಇನ್ನು ಕೆಲವು ಪ್ರಾದೇಶಿಕ ಕೇಂದ್ರಗಳಲ್ಲಿ ಕಟ್ಟಡಗಳು ಬಾಡಿಗೆಗೆ ಇರುತ್ತದೆ ಎಂದು ತಿಳಿಸಿದರು.

ಮುಂದುವರಿಸುತ್ತಾ, ಉತ್ತರ ಕರ್ನಾಟಕದಲ್ಲಿ 11 ಪ್ರಾದೇಶಿಕ ಕೇಂದ್ರಗಳನ್ನು ಹೊಸದಾಗಿ ತೆರೆಯಲು ಅನುಮೋದನೆ ಪಡೆಯಲಾಗಿದೆ. ಉತ್ತರ ಕರ್ನಾಟಕದ ಕೆಲವು ಪ್ರದೇಶಗಳಾದ ಯಾದಗಿರಿ, ರಾಯಚೂರು, ಕೊಪ್ಪಳ, ಗದಗ್, ಹಾವೇರಿ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರಗಳು ಇರುವುದಿಲ್ಲ. ನಮ್ಮ ವಿ.ವಿ ಗೆ ಈ ಜಿಲ್ಲೆಗಳಿಂದ ಬಹಳಷ್ಟು ವಿದ್ಯಾರ್ಥಿಗಳು ಪ್ರವೇಶಾತಿ ಹೊಂದುತ್ತಿದ್ದು, ಜನವರಿ 2022 ಶೈಕ್ಷಣಿಕ ಸಾಲಿಗೆ 6180 ವಿದ್ಯಾರ್ಥಿಗಳು ಪ್ರವೇಶಾತಿ ಹೊಂದಿರುತ್ತಾರೆ. ಜನವರಿ 2023 ಶೈಕ್ಷಣಿಕ ಸಾಲಿನಲ್ಲಿ ಅಂದಾಜು 18500 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. ಈ ಪೈಕಿ ಹೆಚ್ಚಿನ ಪ್ರವೇಶಾತಿಯು ಬೆಳಗಾಂ, ಬಾಗಲಕೋಟೆ, ಬಿಜಾಪುರ, ಗುಲ್ಬರ್ಗಾ, ಬಳ್ಳಾರಿ ಕೇಂದ್ರಗಳಲ್ಲಿ 1500–1600 ವಿದ್ಯಾರ್ಥಿಗಳು ಪ್ರವೇಶಾತಿಯನ್ನು ಹೊಂದಿರುತ್ತಾರೆ ಎಂದು ಸಭೆಗೆ ತಿಳಿಸಿದರು. ಮುಂದುವರೆದು ಮಾತನಾಡಿದ ಕುಲಸಚಿವರು, ಸಂಪರ್ಕ ಕಾರ್ಯಕ್ರಮಗಳನ್ನು ವಿ.ವಿ ನಿಲಯದ ಅಧ್ಯಾಪಕರುಗಳಿಂದ ನಡೆಸುತ್ತಿದ್ದು, ಪ್ರತಿ ಕೇಂದ್ರಗಳಲ್ಲಿ 8–10 ದಿವಸಗಳ ಕಾಲ ತರಗತಿಗಳನ್ನು ನಡೆಸುವುದಾಗಿ ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಪ್ರತಿ ಪ್ರಾದೇಶಿಕ ಕೇಂದ್ರದಲ್ಲಿ ನಿಯೋಜನೆಗೊಂಡ ಸಿಬ್ಬಂದಿಗಳ ಬಗ್ಗೆ ಹಾಗು ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸುವ ಸಂಬಂಧ ಲಭ್ಯವಿರುವ ಸ್ಥಳಾವಕಾಶದ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಕೋರಿದರು.

ಕುಲಪತಿಗಳು | ಕುಲಸಚಿವರು

ಕುಲಸಚಿವರು ಮಾತನಾಡಿ, ಪ್ರತಿಯೊಂದು ಪ್ರಾದೇಶಿಕ ಕೇಂದ್ರದಲ್ಲೂ 6 ರಿಂದ 7 ಸಿಬ್ಬಂದಿ ವರ್ಗದವರಿದ್ದು, ಪ್ರವೇಶಾತಿ ಸಂಖ್ಯೆಯನ್ನು ಪರಿಗಣಿಸಿ ಅದಕ್ಕೆ ಅನುಗುಣವಾಗಿ ಸಿಬ್ಬಂದಿಗಳನ್ನು ನೀಡಲಾಗುವುದು ಎಂದು ತಿಳಿಸಿದರು. ನಂತರ ಮಾತನಾಡಿ, ತುಮಕೂರು, ಮಂಡ್ಯ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಬಳ್ಳಾರಿ ಸ್ಥಳಗಳಲ್ಲಿ ಸ್ವಂತ ಕಟ್ಟಡಗಳು ಇರುವುದರಿಂದ ವಿದ್ಯಾರ್ಥಿಗಳಿಗೆ ತರಗತಿಗಳು ಹಾಗು ಪರೀಕ್ಷೆಗಳನ್ನು ಆಯಾ ಕೇಂದ್ರಗಳಲ್ಲೇ ನಡೆಸಲಾಗುತ್ತಿರುವುದಾಗಿ ತಿಳಿಸಿದರು.

ಮುಂದುವರೆದು ಮಾತನಾಡಿದ ಕುಲಸಚಿವರು, ಮಾನ್ಯ ಕುಲಪತಿಯವರ ಅನುಮತಿ ಪಡೆದು ಈ ಜಿಲ್ಲೆಗಳಲ್ಲಿ ವಿಜ್ಞಾನ ಕಾಲೇಜನ್ನು ಗುರುತಿಸಿ ಶೀಘ್ರದಲ್ಲಿಯೇ practical exam ಗಳನ್ನು ಕೂಡ ನಡೆಸಲಾಗುವುದೆಂದು ತಿಳಿಸಿದರು. ಈ ಪ್ರಕ್ರಿಯೆಗೆ ವಿ.ವಿ ಯ ಅಧ್ಯಾಪಕರುಗಳನ್ನು ನಿಯೋಜಿಸಲಾಗುವುದೆಂದು, ಇದರಿಂದಾಗಿ B.Sc ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತದೆ ಎಂದು ತಿಳಿಸಿದರು ಮತ್ತು ಬಿ.ಎ., ಬಿ.ಕಾಂ., ಎಂ.ಎ., ಎಂ.ಕಾಂ., ಕಾರ್ಯಕ್ರಮಗಳನ್ನು ನಡೆಸಲು ಕೂಡ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ನಮ್ಮ ವಿ.ವಿ.ಯ ಎಲ್ಲಾ ಕಾರ್ಯಕ್ರಮಗಳಿಂದ (B.A., B.Com., M.A., M.Com., M.Sc., PG Diploma, Diploma) ಸೇರಿ ವಿದ್ಯಾರ್ಥಿಗಳ ಸಂಖ್ಯೆ ಒಟ್ಟು 63000 ಗಳಿದ್ದು, ಜನವರಿ 2023 cycle ನಲ್ಲಿ 18500 ಪ್ರವೇಶಾತಿ ನಡೆದಿರುತ್ತದೆ ಹಾಗು ಮುಕ್ತ ವಿ.ವಿ ಯು 3 tire system ನಲ್ಲಿ ಕೆಲಸ ನಿರ್ವಹಿಸುತ್ತಿದೆ, (ಒಂದು headquarters ನಲ್ಲಿ ಇನ್ನೊಂದು ಪ್ರಾದೇಶಿಕ ಕೇಂದ್ರದಲ್ಲಿ ಹಾಗು study centre ನಲ್ಲಿ) ಎಂದು ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, study centre ಬಗ್ಗೆ ಮಾಹಿತಿಯನ್ನು ನೀಡುವಂತೆ ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ, study centre ಗಳು ಪ್ರಾದೇಶಿಕ ಕೇಂದ್ರದ ಅಡಿಯಲ್ಲಿ ಕೆಲಸ ನಿರ್ವಹಿಸುತ್ತದೆ ಎಂದು ತಿಳಿಸಿ ಯಾವುದೇ degree ಕಾಲೇಜಿನವರು study centre ಅನ್ನಾಗಿ ಪಡೆಯಬೇಕಾದಲ್ಲಿ affiliation ಮೂಲಕ ಪಡೆದುಕೊಳ್ಳುತ್ತಾರೆ ಎಂದು ಸಭೆಗೆ ತಿಳಿಸಿದರು. ವಿ.ವಿ ಯಲ್ಲಿ ಒಟ್ಟು 23 ಪ್ರಾದೇಶಿಕ ಕೇಂದ್ರಗಳು, 184 study centre ಗಳು ಕೆಲಸ ನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಸಿ.ಎ ನಿವೇಶನ/ಜಮೀನನ್ನು ಪಡೆಯುವುದರ ಸಂಬಂಧ ರೂಪಿಸಿಕೊಂಡಿರುವುದರ ಬಗ್ಗೆ ಮಾಹಿತಿಯನ್ನು ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರಸ್ತುತ 23 ಜಿಲ್ಲೆಗಳನ್ನು ಹೊರತುಪಡಿಸಿ, ಬಾಕಿ ಉಳಿದ ಎಲ್ಲಾ ಜಿಲ್ಲೆಗಳಲ್ಲಿಯೂ ಸಿ.ಎ ನಿವೇಶನ/ಜಮೀನನ್ನು ಪಡೆಯಲು ಯೋಜನೆ ರೂಪಿಸಿದ್ದು, ಈ ಸಂಬಂಧ ಜಿಲ್ಲಾಧಿಕಾರಿಗಳಿಗೆ ಪತ್ರವನ್ನು ಬರೆದಿರುವುದಾಗಿ ತಿಳಿಸಿದರು.

ಕುಲಪತಿಗಳು | ಕುಲಸಚಿವರು

ನಂತರ ಮಾನ್ಯ ಕುಲಪತಿಗಳು ಮಾತನಾಡಿ, ಗುಲ್ಬರ್ಗಾ ವಿಶ್ವವಿದ್ಯಾನಿಲಯದವರು 1 ಎಕರೆ ಜಮೀನನ್ನು ಉಚಿತವಾಗಿ ನೀಡಿರುತ್ತಾರೆ ಮತ್ತು ಬಿಜಾಪುರದಲ್ಲಿಯೂ ಕೂಡ ಉಚಿತವಾಗಿ ನೀಡುವಂತೆ ತಿಳಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, practically ಮುಕ್ತ ವಿ.ವಿ.ಯು ನಿವೇಶನದ ಮೇಲೆ invest ಮಾಡುವುದರ ಬಗ್ಗೆ ಮತ್ತು construction ಮಾಡುವುದರ ಬಗ್ಗೆ, ಹಣಕಾಸಿನ ಸಾಮರ್ಥ್ಯವಿರಬೇಕು ಎಂದು ಸಭೆಯಲ್ಲಿ ತಿಳಿಸಿದರು.

ಮಾನ್ಯ ಕುಲಸಚಿವರು ಮಾತನಾಡಿ, ಆರ್ಥಿಕ ಸ್ಥಿತಿಯನ್ನು ನೋಡಿಕೊಂಡು, ಉತ್ತಮವಾಗಿ ನಿರ್ವಹಿಸಬಹುದಾದಂತಹ ನಿವೇಶನವನ್ನು ಪಡೆಯುವುದಾಗಿ ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿ ಇರುವ ಜಿಲ್ಲೆಗೆ ಆದ್ಯತೆಯನ್ನು ನೀಡುವಂತೆ ಹಾಗು ಒಂದೊಂದಾಗಿ ಮಾಡುವಂತೆ ಸಲಹೆ ನೀಡಿದರು.

ಮಾನ್ಯ ಕುಲಸಚಿವರು ಮಾತನಾಡಿ, ಮೊದಲು ನಿವೇಶನವನ್ನು ಪಡೆದುಕೊಂಡು ನಂತರ ಕಟ್ಟಡವನ್ನು ನಿರ್ಮಿಸುವ ಪ್ರಕ್ರಿಯೆಯನ್ನು ನಡೆಸುವುದಾಗಿ ತಿಳಿಸಿದರು.

ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಕುಲಪತಿಗಳಿಗೆ ಅಧಿಕಾರವಿರುವುದರಿಂದ land ಉಚಿತವಾಗಿ ಕೊಡಬಹುದು. Land availability ಯನ್ನು ನೋಡಿಕೊಳ್ಳಬೇಕು. ಬೆಂಗಳೂರಿನ ಸುತ್ತಾ ಮುತ್ತಾ ನಿವೇಶನವು ದೊರಕುವುದು ಕಷ್ಟಸಾಧ್ಯ. ಉತ್ತರ ಕರ್ನಾಟಕದಲ್ಲಿ ನಿವೇಶನವು ದೊರಕುವುದರಿಂದ ದೂರಶಿಕ್ಷಣವನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ನಿವೇಶನವನ್ನು ಪಡೆಯಬಹುದೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರಸ್ತುತ ಕಲ್ಯಾಣ ಕರ್ನಾಟಕಗೆ fund ಇದ್ದು. ಎಲ್ಲಾ 07 ಜಿಲ್ಲೆಗಳು ನಮ್ಮ ವ್ಯಾಪ್ತಿಗೆ ಬಂದಿವೆ. ಕಲ್ಯಾಣ ಕರ್ನಾಟಕದಲ್ಲಿ ಅಭಿವೃದ್ಧಿ ಮಾಡಲಾಗುವುದೆಂದು ಅಲ್ಲಿನ ಮಂತ್ರಿಗಳನ್ನು ಮನವಿ ಮಾಡಿಕೊಂಡಿದ್ದು, ನಿರ್ದೇಶಕರು ಅಥವಾ ಅಧ್ಯಕ್ಷರುಗಳು ಮಂಜೂರಾತಿ ಮಾಡುವ ಆಶಯವನ್ನು ಹೊಂದಿದ್ದೇವೆ, ಬಿಜಾಪುರದಲ್ಲಿ land ಅನ್ನು ಅಲ್ಲಿನ ಜಿಲ್ಲಾಧಿಕಾರಿಯವರು ಉಚಿತವಾಗಿ ನೀಡಿರುತ್ತಾರೆ ಮತ್ತು ಗುಲ್ಬರ್ಗಾದಲ್ಲಿ 1 ಎಕರೆ ಜಮೀನನ್ನು ವಿಶ್ವವಿದ್ಯಾನಿಲಯದವರು ನೀಡುವವರಿದ್ದಾರೆಂದು ಸಭೆಯಲ್ಲಿ ತಿಳಿಸಿದರು.

ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಇಷ್ಟೆಲ್ಲಾ ವಿಚಾರಗಳನ್ನು ಸಭೆಯಲ್ಲಿ ವಿವರವಾಗಿ ತಿಳಿಸಿಕೊಟ್ಟಿದ್ದಕ್ಕೆ ಮಾನ್ಯ ಕುಲಪತಿಗಳಿಗೆ ಧನ್ಯವಾದಗಳನ್ನು ತಿಳಿಸಿದರು.

******

ಕುಲಪತಿಗಳು

ಕುಲಸಚಿವರು

ತೀರ್ಮಾನ :

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಪ್ರಾದೇಶಿಕ ಕೇಂದ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಾತಿ ಪಡೆದ ವಿದ್ಯರ್ಥಿಗಳ ಸಂಖ್ಯೆಯನ್ನು ಪರಿಗಣಿಸಿ, ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸುಗಮ ಕೆಲಸದ ನಿರ್ವಹಣೆ ದೃಷ್ಟಿಯಿಂದ ಆದ್ಯತೆಯ ಮೇರೆಗೆ ಪ್ರಾದೇಶಿಕ ಕೇಂದ್ರಗಳಲ್ಲಿ ಸಿ.ಎ. ನಿವೇಶನ/ಜಮೀನನ್ನು ಪಡೆಯುವಂತೆ ಸಭೆಯು ಒಮ್ಮತದಿಂದ ತೀರ್ಮಾನಿಸಿತು..

******

## ವಿಷಯ ಸಂಖ್ಯೆ:172.07

ವಿಷಯ : ಕರಾಮುವಿ ನಿಲಯದ ನೂತನ ಪ್ರಾದೇಶಿಕ ಕೇಂದ್ರಗಳಿಗೆ ಅಗತ್ಯವಿರುವ ಪೀಠೋಪಕರಣಗಳನ್ನು ನೂತನವಾಗಿ ಖರೀದಿಸುವ ಬಗ್ಗೆ.

******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಪ್ರತಿಷ್ಠಿತ ನ್ಯಾಕ್ ಸಮಿತಿಯಿಂದ A+ ಶ್ರೇಣಿಯ ಮಾನ್ಯತೆ ದೊರೆತಿದ್ದು ಈ ಸಂಬಂಧ ರಾಜ್ಯದ ಉತ್ತರ ಭಾಗದಲ್ಲಿ ವಿವಿನಿಲಯದ ನೂತನ ಪ್ರಾದೇಶಿಕ ಕೇಂದ್ರಗಳನ್ನು ಸ್ಥಾಪಿಸಲು ವಿವಿನಿಲಯವು ತೀರ್ಮಾನಿಸಿದ್ದು ಈ ಸಂಬಂಧ ನೂತನವಾಗಿ ಪ್ರಾರಂಭಿಸಲು ಉದ್ದೇಶಿಸಲಾಗಿರುವ ಸುಮಾರು 13 ಪ್ರಾದೇಶಿಕ ಕೇಂದ್ರಗಳ ಕಛೇರಿಗೆ ಅಗತ್ಯವಿರುವ ಪೀಠೋಪಕರಣಗಳನ್ನು ನೂತನವಾಗಿ ಖರೀದಿಸಲು ವಿವಿನಿಲಯದ ನಿಯಮಾನುಸಾರ ಕ್ರಮವಹಿಸಿ ಸರ್ಕಾರಿ ಸ್ವಾಮ್ಯದ GEM ಮುಖಾಂತರ ನಿರ್ವಹಿಸಬಹುದಾಗಿರುತ್ತದೆ. ಅಗತ್ಯವಿರುವ ಪೀಠೋಪಕರಣಗಳನ್ನು ಖರೀದಿಸಲು ಸ್ಥಳೀಯ ಮಾರುಕಟ್ಟೆ ದರ ಅಳವಡಿಸಿ ಅಂದಾಜನ್ನು ರೂ. 26.00 ಲಕ್ಷಗಳಿಗೆ ತಯಾರಿಸಿದೆ. ಪ್ರಸ್ತುತ ಕೆಲಸವನ್ನು ನಿಯಮಾನುಸಾರ ಕೈಗೊಳ್ಳಲು ಸದರಿ ವಿಷಯವನ್ನು ಘನ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

******

ಮಾನ್ಯ ಕುಲಸಚಿವರು ಮಾತನಾಡಿ, ವಿ.ವಿ.ಯು ನೂತನವಾಗಿ 11 ಪ್ರಾದೇಶಿಕ ಕೇಂದ್ರಗಳನ್ನು ಪ್ರಾರಂಭಿಸಿದ್ದು, ಸದರಿ ಪ್ರಾದೇಶಿಕ ಕೇಂದ್ರಗಳಿಗೆ tables, chair ಗಳು ಮುಂತಾದ ಪೀಠೋಪಕರಣಗಳ ಅಗತ್ಯವಿರುವುದಾಗಿ ಸಭೆಗೆ ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಪ್ರಸ್ತಾವನೆಯಲ್ಲಿ 13 ಪ್ರಾದೇಶಿಕ ಕೇಂದ್ರಗಳ ಬಗ್ಗೆ ವಿವರಣೆ ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರಸ್ತುತ ಬೆಂಗಳೂರಿನಲ್ಲಿ ಎರಡು ಹೊಸ ಕೇಂದ್ರಗಳನ್ನು ತೆರೆದಿದ್ದು, ಹಾಲಿ ನಾಲ್ಕು ಕೇಂದ್ರಗಳು ಬೆಂಗಳೂರಿನಲ್ಲಿರುವುದಾಗಿ ತಿಳಿಸಿದರು. Urban area ದಲ್ಲಿ ಕೇಂದ್ರವನ್ನು ಪ್ರಾರಂಭಿಸಿದಲ್ಲಿ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ, ಈ ನಿಟ್ಟಿನಲ್ಲಿ survey ಮಾಡಿ ಕೆಲಸ ನಿರ್ವಹಿಸಲು ಈಗಾಗಲೇ ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು.

ಕುಲಪತಿಗಳು ಕುಲಸಚಿವರು

ಕುಲಸಚಿವರು ಮಾತನಾಡಿ, ಪೀಣ್ಯ ಪ್ರದೇಶದಲ್ಲಿ ಕಾರ್ಮಿಕರು ಹೆಚ್ಚಾಗಿದ್ದು, Garments ಅಂತಹ ಸಣ್ಣ ಪುಟ್ಟ ಅಂಗಡಿಗಳಲ್ಲಿ ಕೆಲಸಮಾಡುತ್ತಿರುತ್ತಾರೆ. ಇಂತಹವರಿಗೆ ಓದಲು ಆಸಕ್ತಿ ಇರುತ್ತದೆ ಆದರೆ ಅವಕಾಶ ಇರುವುದಿಲ್ಲ. ಆದ್ದರಿಂದ ಇಂತಹ ಪ್ರದೇಶಗಳಲ್ಲಿ ಕೇಂದ್ರವು ಸ್ಥಾಪನೆಯಾದರೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತದೆ ಮತ್ತು ಆರ್ಥಿಕವಾಗಿ ವಿಶ್ವವಿದ್ಯಾನಿಲಯಕ್ಕೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಗುಣಮಟ್ಟ ಮತ್ತು ಉತ್ತಮ ಸೇವೆ ಲಭ್ಯವಿರುವ ಕಡೆ ಪೀಠೋಪಕರಣಗಳನ್ನು ಖರೀದಿಸುವಂತೆ ಅಭಿಪ್ರಾಯ ನೀಡಿದರು.

ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಇಂತಹ ಪ್ರಕ್ರಿಯೆಗಳನ್ನು e-procurement ಮೂಲಕ ಕ್ರಮವಹಿಸುವಂತೆ ಸಲಹೆ ನೀಡಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಒಳ್ಳೆಯ ಸೇವೆಯನ್ನು ಒದಗಿಸುವವರು ಸ್ಥಳೀಯರಾಗಿರಬೇಕೆಂಬ ಷರತ್ತನ್ನು quote ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.

**ತೀರ್ಮಾನ :**

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ನೂತನವಾಗಿ ಪ್ರಾರಂಭಿಸಲಾಗಿರುವ 13 ಪ್ರಾದೇಶಿಕ ಕೇಂದ್ರಗಳಿಗೆ tables, chairs ಮುಂತಾದ ಪೀಠೋಪಕರಣಗಳನ್ನು ಖರೀದಿಸುವ ಮುನ್ನ ಟೆಂಡರ್‌ನಲ್ಲಿನ ಷರತ್ತುಗಳನ್ನು ಪಾಲಿಸಿ ನಿಯಮಾನುಸಾರ ಕ್ರಮವಹಿಸಲು ಸರ್ಕಾರಿ GEM Portal ಮುಖಾಂತರ ಪೀಠೋಪಕರಣಗಳನ್ನು ಖರೀದಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

******

## ವಿಷಯ ಸಂಖ್ಯೆ:172.08

**ವಿಷಯ : ವಿವಿನಿಲಯದ ಆವರಣನದಲ್ಲಿ On Grid Solar Power Plant ಅಳವಡಿಸುವ ಬಗ್ಗೆ.**

*****

ವಿವಿನಿಲಯದ ಮುಕ್ತ ಗಂಗೋತ್ರಿ ಅವರಣದಲ್ಲಿ ಪ್ರಸ್ತುತ 635 ಹೆಚ್‌ಟಿ ಸಾಮರ್ಥ್ಯದ ವಿದ್ಯುತ್ ಸ್ಥಾವರವಿದ್ದು ಇದರಲ್ಲಿ ಪ್ರತಿ ಮಾಹೆ 56000 ಯೂನಿಟ್ ವಿದ್ಯುತ್ ಬಳಕೆಯಾಗುತ್ತಿದೆ. ಅಂತಯೇ ವಿದ್ಯುತ್ ಶಕ್ತಿ ಬಳಕೆಯ ಮೊತ್ತ ಪ್ರತಿ ಮಾಹೆ ರೂ. 5.00 ರಿಂದ 6.00 ಲಕ್ಷಗಳವರೆಗೆ ಪಾವತಿಸಲಾಗುತ್ತಿದ್ದು ವಿವಿನಿಲಯದಲ್ಲಿ On Grid Solar Power Plant (200kw Roof top solar plant) ಅಳವಡಿಸಿಕೊಂಡಲ್ಲಿ ಪ್ರತಿ ಮಾಹೆ ಸರಿಸುಮಾರು 20 ಸಾವಿರ ವಿದ್ಯುತ್ ಯೂನಿಟ್ ಉಳಿತಾಯವಾಗುವ ಜೊತೆಗೆ ವಿದ್ಯುತ್ ಹುಂಡಿಯಲ್ಲಿ ಸುಮಾರು ಅಂದಾಜು 1.50 ರಿಂದ 2.00 ಲಕ್ಷಗಳವರೆಗೆ ಕಡಿಮೆ ಆಗುವ ಸಾಧ್ಯತೆಯಿರುತ್ತದೆ. ಪ್ರಸ್ತುತ ಮಾರುಕಟ್ಟೆಯ ದರದ ಅನುಸಾರ Solar Power Plant ಅಳವಡಿಸುವ ಸಂಬಂಧದ ಕೆಲಸ/ಕಾಮಗಾರಿಯನ್ನು ನಿರ್ವಹಿಸಲು ಅಂದಾಜು ರೂ 300.00 ಲಕ್ಷಗಳು (GST ರಹಿತ) ವೆಚ್ಚವಾಗಬಹುದೆಂದು

ಕುಲಪತಿಗಳು ಕುಲಸಚಿವರು

ಹಾಗೂ ಸದರಿ ಕೆಲಸವನ್ನು ನಿಯಮಾನುಸಾರ e-procurement ಮೂಲಕ tender ಆಹ್ವಾನಿಸಿ ಅಥವಾ ಸರ್ಕಾರಿ ಸ್ವಾಮ್ಯದ GEM portal ಮುಖಾಂತರ ನಿರ್ವಹಿಸಲು ಸದರಿ ವಿಷಯವನ್ನು ಘನ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

******

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ವಿದ್ಯುತ್ ಬಳಕೆಯು ಹೆಚ್ಚಾಗುತ್ತಿದ್ದು, ವಿದ್ಯುತ್ ಬಳಕೆಯನ್ನು ತಡೆಗಟ್ಟಲು ಮತ್ತು ಆರ್ಥಿಕ ಹೊರೆಯನ್ನು ಕಡಿಮೆ ಮಾಡಲು **On Grid Solar Power Plant** ನ್ನು ಅಳವಡಿಸಿಕೊಳ್ಳಲು ಅನುಮತಿ ಕೋರಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಈ ವಿಷಯವನ್ನು ಅನುಮತಿಗಾಗಿ ಮಂಡಿಸಿದ್ದು, ನಂತರದಲ್ಲಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದೆಂದು ತಿಳಿಸಿದರು.

ನಂತರ ಮಾತನಾಡಿದ ಮಾನ್ಯ ಕುಲಪತಿಗಳು ವಿ.ವಿ. ಯ ಆವರಣದಲ್ಲಿ ಆಡಳಿತ ಭವನ, ವಿಜ್ಞಾನ ಭವನ, ಪರೀಕ್ಷಾ ಭವನ, ಪ್ರವೇಶಾತಿ ವಿಭಾಗ, ಘಟಿಕೋತ್ಸವ ಭವನ, ಅಥಿತಿಗೃಹ ಇತ್ಯಾದಿ ಕಟ್ಟಡಗಳು ಇರುವುದರಿಂದ **On Grid Solar Power Plant** ನ್ನು ಅಳವಡಿಸಿಕೊಳ್ಳುವುದರಿಂದ ವಿದ್ಯುತ್ ಉಳಿತಾಯವಾಗುತ್ತದೆ ಹಾಗೂ ಇದಕ್ಕೆ ಬೇಕಾಗುವ ಮೂಲಭೂತ ಸೌಕರ್ಯಗಳು ಉತ್ತಮವಾಗಿ ಲಭ್ಯವಿದೆ ಎಂದು ತಿಳಿಸಿದರು.

ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಸದರಿ ಪ್ರಸ್ತಾವನೆಯು ಆಯವ್ಯಯ ವೆಚ್ಚದಲ್ಲಿ ನಿಗದಿ ಪಡಿಸಿರುವುದರ ಬಗ್ಗೆ ವಿವರಣೆ ಕೇಳಿದರು.

ಕುಲಸಚಿವರು ಮಾತನಾಡಿ, ಪ್ರಸ್ತಾವನೆಯ ವೆಚ್ಚವನ್ನು ಆಯವ್ಯಯ ವೆಚ್ಚದಲ್ಲಿ ನಿಗದಿ ಪಡಿಸಲಾಗಿದೆ ಎಂದು ತಿಳಿಸಿದರು.

ತೀರ್ಮಾನ :

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿವಿನಿಲಯದ ಆವರಣದಲ್ಲಿ On Grid Solar Power Plant ನ್ನು ಅಳವಡಿಸಿಕೊಳ್ಳುವ ಸಂಬಂಧ ನಿಯಮಾನುಸಾರ e-procurement ಮೂಲಕ tender ಆಹ್ವಾನಿಸಿ ಅಥವಾ ಸರ್ಕಾರಿ ಸ್ವಾಮ್ಯದ GEM Portal ಮುಖಾಂತರ ಕೆಲಸ ನಿರ್ವಹಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

*******

ಕುಲಪತಿಗಳು

ಕುಲಸಚಿವರು

**ವಿಷಯ ಸಂಖ್ಯೆ: 172.09**

ವಿಷಯ : ಕರಾಮುವಿ ನಿಲಯಕ್ಕೆ ಅಗತ್ಯವಿರುವ ಎರಡು ಸಂಖ್ಯೆಯ ವಾಹನಗಳನ್ನು ಖರೀದಿಸ ಬೇಕಾಗಿರುವ ಸಂಬಂಧ ಪಾವತಿಸಬೇಕಾಗಿರುವ ಹೆಚ್ಚುವರಿ ಮೊತ್ತವನ್ನು Gem Portal ಇವರಿಗೆ ಪಾವತಿಸುವ ಬಗ್ಗೆ.

******

ಕರಾಮುವಿ ನಿಲಯದ ಪರೀಕ್ಷಾ ಸಾಮಗ್ರಿಗಳ ಸಾಗಣೆಯ ಉದ್ದೇಶಕ್ಕಾಗಿ ಒಂದು ಲಘು ವಾಹನವಾದ (Ashok Leyland Partner) ವಾಹನವನ್ನು ಮತ್ತು ಕುಲಸಚಿವರ (ಪರೀಕ್ಷಾಂಗ) ರವರ ಸಂಚಾರದ ಉದ್ದೇಶಕ್ಕಾಗಿ ಒಂದು (Toyota Innova Crysta Base Model) ಕಾರನ್ನು ಸರ್ಕಾರಿ ಸ್ವಾಮ್ಯದ Gem Portal ಮುಖಾಂತರ ಖರೀದಿಸಲು ಸದರಿ ವಾಹನಗಳಿಗೆ Gem Portal ನಲ್ಲಿ ನಮೂದಿಸಲಾಗಿರುವಂತೆ Ashok Leyland ವಾಹನಕ್ಕೆ ರೂ. 14.00 ಲಕ್ಷಗಳು ಮಾತ್ರ ಮತ್ತು Toyota Innova Crysta Base Model ವಾಹನಕ್ಕೆ ರೂ. 14.00 ಲಕ್ಷಗಳು ಮಾತ್ರಗಳ ಮಿತಿಯಲ್ಲಿ ಖರೀದಿಸಲು ದಿನಾಂಕ:18.03.2023 ರಂದು ನಡೆದ 171ನೇ ವ್ಯವಸ್ಥಾಪನಾ ಮಂಡಳಿಯ ಸಭೆಯು ತೀರ್ಮಾನಿಸಿರುತ್ತದೆ. ಆದರೆ Gem Portal ನಲ್ಲಿ Ashok Leyland ವಾಹನವು ಲಭ್ಯವಿಲ್ಲದ ಕಾರಣ ಅಧಿಕ ಸಾಮರ್ಥ್ಯವುಳ್ಳ 5.2 ಟನ್ ಸಾಮರ್ಥ್ಯದ Eicher ವಾಹನವನ್ನು ರೂ. 15,80,000/-ಗಳಿಗೆ ಖರೀದಿಸಲಾಗಿರುತ್ತದೆ ಹಾಗೂ Innova Crysta ವಾಹನದ ಬೆಲೆಯು Gem Portal ನಲ್ಲಿ ರೂ.17,92,782/- (+ other Taxes) ಗಳಾಗಿದ್ದು ಸದರಿ ವಾಹನವನ್ನೂ ಖರೀದಿಸಲಾಗಿರುತ್ತದೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಳೆದ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಸಂಬಂಧಪಟ್ಟ ವಾಹನವನ್ನು ಖರೀದಿಸಲು ಅನುಮೋದಿಸಲ್ಪಟ್ಟಿರುವ ನಿಗಧಿತ ಮೊತ್ತ ರೂ. 28.00 ಲಕ್ಷಗಳಾಗಿದ್ದು ಪ್ರಸ್ತುತ ಎರಡು ವಾಹನಗಳಿಗೆ ಒಟ್ಟಾರೆ ಮೊತ್ತ ರೂ. 34.00 (+ other Taxes) ಲಕ್ಷಗಳಾಗಿರುತ್ತದೆ. ಆದ್ದರಿಂದ ವ್ಯತ್ಯಾಸವಾಗಿರುವ ಮೊತ್ತ ರೂ.6.00 (+ other Taxes) ಲಕ್ಷಗಳನ್ನು ಸಂಬಂಧಪಟ್ಟ Gem Portal ರವರಿಗೆ ಪಾವತಿಸಲಾಗಿರುವುದರಿಂದ ಸದರಿ ವಿಷಯವನ್ನು ಸಭೆಯ ಅವಗಾಹನೆಗೆ ತರುತ್ತಾ ಅನುಸಮರ್ಥನೆಗಾಗಿ ಮಂಡಿಸಲಾಗಿದೆ.

******

ಕುಲಸಚಿವರು ಮಾತನಾಡಿ, ಸದರಿ ವಿಷಯದ ಬಗ್ಗೆ ವಿವರಿಸಿ, ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ವಿ.ವಿ. ನಿಲಯಕ್ಕೆ ಎರಡು ಸಂಖ್ಯೆಯ ವಾಹನಗಳ ಅಗತ್ಯವಿದ್ದರಿಂದ ವಾಹನಗಳನ್ನು ಖರೀದಿಸಲು ಅನುಮೋದನೆ ಪಡೆಯಲಾಗಿದೆ ಎಂದು ತಿಳಿಸಿದರು.

ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಮತ್ತು ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಇವರುಗಳು ಮಾತನಾಡಿ, ವಾಹನ ಖರೀದಿ ಸಂಬಂಧ ವಿ.ವಿ. ಯು ಮುಂಚಿತವಾಗಿ ಸರ್ಕಾರಕ್ಕೆ ವಿಷಯವನ್ನು ತಿಳಿಸಿ, ಸರ್ಕಾರದ ಅನುಮೋದನೆಯನ್ನು ಪಡೆದುಕೊಳ್ಳಬೇಕಾಗಿದ್ದು, ಇದು ಆಡಿಟ್ ಆಕ್ಷೇಪಣೆಯಾಗುವ ಸಾಧ್ಯತೆಗಳಿವೆ ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಯಿಸಿದ ಕುಲಸಚಿವರು, ಪರೀಕ್ಷಾ ಕೆಲಸಗಳಿಗಾಗಿ ತುರ್ತು ಅವಶ್ಯವಿದ್ದ ಕಾರಣ ಖರೀದಿಸಬೇಕಾಯಿತು. ಈ ಹಿಂದಿನ ಸಭೆಯಲ್ಲಿ ರೂ. 28 ಲಕ್ಷಕ್ಕೆ ಅನುಮೋದನೆ ಪಡೆದುಕೊಳ್ಳಲಾಗಿತ್ತು.

ಪ್ರಸ್ತುತ, ರೂ. 06 ಲಕ್ಷಗಳ ಹೆಚ್ಚುವರಿ ಮೊತ್ತವನ್ನು ಪಾವತಿಸಿದ್ದು, ಇದಕ್ಕೆ ವ್ಯವಸ್ಥಾಪನಾ ಮಂಡಳಿ ಅನುಸಮರ್ಥನೆಗಾಗಿ ವಿಷಯವನ್ನು ಮಂಡಿಸಲಾಗಿದೆ ಎಂದು ತಿಳಿಸಿದರು.

******

ಕುಲಪತಿಗಳು　　　　ಕುಲಸಚಿವರು

ತೀರ್ಮಾನ :

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಕರಾಮುವಿ ನಿಲಯಕ್ಕೆ ಎರಡು ಸಂಖ್ಯೆಯ ವಾಹನಗಳನ್ನು ಖರೀದಿಸಿದ್ದು, ಹೆಚ್ಚುವರಿ ಮೊತ್ತವಾದ ರೂ.6.00 (+ other Taxes) ಲಕ್ಷಗಳನ್ನು GEM Portal ಇವರಿಗೆ ಪಾವತಿಸಲಾಗಿರುವುದರಿಂದ ಸದರಿ ವಿಷಯದ ಅನುಸಮರ್ಥನೆ ಕುರಿತು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

******

## ವಿಷಯ ಸಂಖ್ಯೆ: 172.10

ವಿಷಯ : ವಿವಿನಿಲಯದ ಸ್ವಂತ ಪ್ರಾದೇಶಿಕ ಕೇಂದ್ರ ಕಟ್ಟಡಗಳಿಗೆ **Eco Friendly LED Lights** ಅಳವಡಿಸುವ ಬಗ್ಗೆ.

******

ವಿವಿನಿಲಯದ ಸ್ವಂತ ಪ್ರಾದೇಶಿಕ ಕೇಂದ್ರಗಳಲ್ಲಿ ಈ ಹಿಂದೆ ಅಳವಡಿಸಲಾಗಿರುವ ಹಳೆ ಮಾದರಿಯ ವಿದ್ಯುತ್ ದೀಪಗಳಿಂದ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಬಳಕೆಯಾಗುತ್ತಿದ್ದು ಇದರ ಬದಲಾಗಿ ನವೀನ ಮಾದರಿಯ (Eco Friendly LED lights) ವಿದ್ಯುತ್ ದೀಪಗಳನ್ನು ಕರಾಮುವಿಯ ಸ್ವಂತ ಕಟ್ಟಡ ಹೊಂದಿರುವ ಪ್ರಾದೇಶಿಕ ಕೇಂದ್ರಗಳಳಿಗೆ ಅಳವಡಿಸಿದ್ದಲ್ಲಿ ಪ್ರತಿ ಮಾಹೆಯ ವಿದ್ಯುತ್ ಹುಂಡಿಯ ಮೊತ್ತವು ಕಡಿಮೆಯಾಗಲಿರುತ್ತದೆ. ಆದುದರಿಂದ ಪ್ರಸ್ತುತ ಮಾರುಕಟ್ಟೆಯ ದರದ ಅನುಸಾರ Eco Friendly LED ಅಳವಡಿಸುವ ಸಂಬಂಧದ ಕೆಲಸ/ಕಾಮಗಾರಿಯನ್ನು ನಿರ್ವಹಿಸಲು ಅಂದಾಜು ರೂ 200.00 ಲಕ್ಷಗಳು (GST ರಹಿತ) ವೆಚ್ಚವಾಗಬಹುದೆಂದು ಹಾಗೂ ಸದರಿ ಕೆಲಸವನ್ನು ನಿಯಾಮಾನುಸಾರ e-procurement ಮೂಲಕ tender ಆಹ್ವಾನಿಸಿ ಅಥವಾ ಸರ್ಕಾರಿ ಸ್ವಾಮ್ಯದ GEM portal ಮುಖಾಂತರ ನಿರ್ವಹಿಸಲು ಸದರಿ ವಿಷಯವನ್ನು ಘನ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

******

ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯದ 09 ಸ್ವಂತ ಪ್ರಾದೇಶಿಕ ಕೇಂದ್ರಗಳಲ್ಲಿ ವಿದ್ಯುತ್ ಖರ್ಚು ಹೆಚ್ಚಾಗಿರುವುದರಿಂದ ವಿದ್ಯುತ್ ಖರ್ಚು ನಿಯಂತ್ರಣಕ್ಕೆ Eco Friendly LED Lights ಅಳವಡಿಸಿಕೊಳ್ಳುವ ಬಗ್ಗೆ ಸಭೆಗೆ ತಿಳಿಸಿದರು. ಇದು ಸ್ವಂತ ಪ್ರಾದೇಶಿಕ ಕೇಂದ್ರಗಳ ಕಟ್ಟಡಗಳಿಗೆ ಮಾತ್ರ ಅನ್ವಯವಾಗುತ್ತಿದ್ದು, ಬಾಡಿಗೆಗೆ ಪಡೆದಿರುವ ಕಟ್ಟಡಗಳಿಗೆ ಅನ್ವಯಿಸುವುದಿಲ್ಲ ಎಂದು ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಒಂದು ಬಾರಿ ಹೂಡಿಕೆಯ ಖಚಿತತೆ ಬಗ್ಗೆ ವಿವರಣೆ ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಇದು ಒಂದು ಬಾರಿ ಹೂಡಿಕೆ ಮಾತ್ರವೇ ಎಂದು ಸಭೆಗೆ ತಿಳಿಸಿದರು.

ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಪ್ರಸ್ತಾವನೆಯ ವೆಚ್ಚಕ್ಕೆ ಸಂಬಂಧಿಸಿದಂತೆ ಆಯವ್ಯಯ ವೆಚ್ಚದಲ್ಲಿ ನಿಗದಿ ಪಡಿಸಿರುವ ಬಗ್ಗೆ, ಆಯವ್ಯಯ ವೆಚ್ಚದಲ್ಲಿ ಹಂಚಿಕೆ ಮಾಡಿರುವ

ಕುಲಪತಿಗಳು | ಕುಲಸಚಿವರು

ಬಗ್ಗೆ, ವಾರ್ಷಿಕ ಆಯವ್ಯಯದಲ್ಲಿ ಹಂಚಿಕೆಯಾಗಿರುವ ಬಗ್ಗೆ ಇತ್ಯಾದಿ ಕುರಿತು ವಿವರಣೆ ಕೇಳಿದರು ಮತ್ತು particular lead ಬಗ್ಗೆ ಮಾಹಿತಿ ನೀಡುವಂತೆ ಕೋರಿದರು.

ಕುಲಸಚಿವರು ಮಾತನಾಡಿ, ಕೆಲವು ವೆಚ್ಚಕ್ಕೆ particular lead ಭರಿಸಲಾಗುವುದು, ಕೆಲವು ಸಾಮಾನ್ಯ ನಿಧಿಯಿಂದ ಭರಿಸಲಾಗಿದೆ. ಹೆಚ್ಚಿನ ಮೊತ್ತ (ಉದಾಹರಣೆಗೆ: 8–10ಕೋಟಿ) ಇರುವ ಶೀರ್ಷಿಕೆಯಿಂದ ಮಾನ್ಯ ಕುಲಪತಿಗಳ ಪೂರ್ವಾನುಮತಿ ಪಡೆದು, ಮತ್ತೊಂದು ಶೀರ್ಷಿಕೆಗೆ ವರ್ಗಾಯಿಸಿಕೊಂಡು ವೆಚ್ಚವನ್ನು ಭರಿಸಲಾಗುವ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಸದರಿ ಕೆಲಸಕ್ಕೆ ವೆಚ್ಚ ಭರಿಸಲು ಆಯವ್ಯಯ ಅಂದಾಜು ವೆಚ್ಚದಲ್ಲಿ ನಿಗಿಪಡಿಸಲಾಗಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಭಾರಿ ಮೊತ್ತದ ವೆಚ್ಚವನ್ನು ವಿ.ವಿ. ನಿಲಯದ ಹಣಕಾಸು ಸಮಿತಿ ಸಭೆಯಿಂದ ಅನುಮೋದನೆ ಪಡೆದುಕೊಳ್ಳಲಾಗಿರುತ್ತದೆ ಎಂದು ತಿಳಿಸಿದರು.

ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಆಯವ್ಯಯ ಅಂದಾಜು ವೆಚ್ಚದಲ್ಲಿ ನಿಗದಿಪಡಿಸಿಕೊಂಡಿರುವ ಪ್ರಕಾರ ಖರ್ಚು ಮಾಡುವ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೋರಿದರು.

ಕುಲಸಚಿವರು ಮಾತನಾಡಿ, ಆಯವ್ಯಯ ಅಂದಾಜು ವೆಚ್ಚದಲ್ಲಿ ನಿಗದಿಪಡಿಸಿಕೊಂಡಿರುವ ಪ್ರಕಾರವೇ ಭರಿಸಲಾಗುತ್ತದೆ, ವಾರ್ಷಿಕ ಆಯವ್ಯಯದಲ್ಲಿ ಭಾರಿ ಮೊತ್ತ ಶೀರ್ಷಿಕೆಯಡಿಯಿಂದ (ಉದಾಹರಣೆಗೆ ಸಾಮಾನ್ಯ ನಿಧಿ) ಇಂತಹ ಸಣ್ಣ ಪುಟ್ಟ ಖರೀದಿಗಳನ್ನು ಭರಿಸಲಾಗುವುದು, budget ಸಿದ್ಧಪಡಿಸುವ ಮೊದಲೇ ಇಂತಹ ಯೋಜನೆಗಳಿಗೆ budget allocation ಮಾಡಿಕೊಳ್ಳಲಾಗುವುದು ಎಂದು ತಿಳಿಸಿ, ಸದರಿ ಖರೀದಿ ವಿಚಾರವಾಗಿ 2022–23 ನೇ ಸಾಲಿನ ಆಯವ್ಯಯ ಅಂದಾಜು ವೆಚ್ಚದಲ್ಲಿ allocation ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

**********

ತೀರ್ಮಾನ :

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ 09 ಸ್ವಂತ ಪ್ರಾದೇಶಿಕ ಕೇಂದ್ರಗಳಲ್ಲಿ Eco Friendly LED Lights ಅಳವಡಿಸಿಕೊಳ್ಳುವ ಸಂಬಂಧ ನಿಯಮಾನುಸಾರ e-procurement ಮೂಲಕ tender ಆಹ್ವಾನಿಸಿ ಅಥವಾ ಸರ್ಕಾರಿ ಸ್ವಾಮ್ಯದ GEM portal ಮುಖಾಂತರ ಕೆಲಸ ನಿರ್ವಹಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

**********

ಕುಲಪತಿಗಳು

ಕುಲಸಚಿವರು

## ವಿಷಯ ಸಂಖ್ಯೆ: 172.11

**ವಿಷಯ : ವಿವಿನಿಲಯದ ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರದಲ್ಲಿ ಶಾಶ್ವತ ಸೇತುವೆ ನಿರ್ಮಿಸುವ ಬಗ್ಗೆ.**

******

ವಿವಿನಿಲಯದ ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರದಲ್ಲಿ ಈ ಹಿಂದೆ ಇದ್ದ ಸಂಪರ್ಕ ಸೇತುವೆಯು ಮಳೆಯಿಂದಾಗಿ ಸಂಪೂರ್ಣವಾಗಿ ನೆಲಸಮಗೊಂಡಿದ್ದು ಪ್ರಾದೇಶಿಕ ಕೇಂದ್ರದ ಸುಸೂತ್ರ ಅಡಳಿತ ನಿರ್ವಹಣೆಯ ದೃಷ್ಟಿಯಿಂದಾಗಿ ಹಾಗೂ ಪ್ರಕೃತಿ ವಿಕೋಪದಿಂದ ಮುಂದಿನ ದಿನಗಳಲ್ಲಿ ಸಂಪರ್ಕಕ್ಕೆ ಯಾವುದೇ ತೊಂದರೆ ಆಗದ ರೀತಿಯಲ್ಲಿ ಶಾಶ್ವತ ಸೇತುವೆಯನ್ನು (RCC BOX CULVERT/ BRIDGE) ನಿರ್ಮಿಸುವುದು ಅತ್ಯಂತ ಅವಶ್ಯಕವಾಗಿರುತ್ತದೆ. ಈ ಸಂಬಂಧ ಸದರಿ ಕೆಲಸವನ್ನು ನಿರ್ವಹಿಸಲು ದಿನಾಂಕ:17.06.2022 ರಂದು ನಡೆದ ವಿವಿನಿಲಯದ 168 ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದ್ದು ಸಭೆಯು ಸಂಬಂದಪಟ್ಟ ಕೆಲಸವನ್ನು ನಿರ್ವಹಿಸಲು ರೂ.48.00 ಲಕ್ಷಗಳಿಗೆ ಅನುಮೋದನೆಯನ್ನು ನೀಡಿರುತ್ತದೆ. ಮುಂದುವರೆದು ಪ್ರಸ್ತುತ ಸೇತುವೆಯ ವಿನ್ಯಾಸ ಬದಲಾವಣೆ ಆಗಿದ್ದು ಹಾಗೂ ಪ್ರಾದೇಶಿಕ ಕೇಂದ್ರದಲ್ಲಿ ಇತರೇ ದುರಸ್ಥಿ ಕಾರ್ಯ ನಿರ್ವಹಿಸಬೇಕಾಗಿರುವ ಕಾರಣ ಸದರಿ ಕೆಲಸಗಳಿಗೆ ರೂ.85.00 ಲಕ್ಷಗಳು ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ. ಪ್ರಸ್ತುತ ರೂ.48.00 ಲಕ್ಷಗಳಿಗೆ ಅನುಮೋದನೆಯಾಗಿರುವ ಮೊತ್ತವನ್ನು ರೂ. 85.00 ಲಕ್ಷಗಳಿಗೆ ಪರಿಷ್ಕರಿಸಬೇಕಾಗಿರುತ್ತದೆ. ಹಾಗೂ ಸದರಿ ಕೆಲಸವನ್ನು ನಿಯಾಮಾನುಸಾರ e-procurement ಮೂಲಕ tender ಆಹ್ವಾನಿಸಿ ನಿರ್ವಹಿಸಲು ಸದರಿ ವಿಷಯವನ್ನು ಘನ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

********

ಕುಲಸಚಿವರು ಮಾತನಾಡಿ, ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರದ ಎದುರು ಚಿಕ್ಕದೊಂದು ಕಾಲುವೆ ಇದ್ದು, ಈ ಕಾಲುವೆ ಮೇಲೆ ಸೇತುವೆ ಇತ್ತು. ಸೇತುವೆಯನ್ನು ದಾಟಿಕೊಂಡೇ ಪ್ರಾದೇಶಿಕ ಕೇಂದ್ರಕ್ಕೆ ಹೋಗಬೇಕಾಗಿತ್ತು. ಕಳೆದ ವರ್ಷ ಸುರಿದ ಭಾರಿ ಮಳೆಯಿಂದಾಗಿ ಸೇತುವೆ ಕೊಚ್ಚಿಕೊಂಡು ಹೋಗಿರುತ್ತದೆ. ಈಗ ಶಾಶ್ವತ ಸೇತುವೆ ನಿರ್ಮಿಸುವ ಸಂಬಂಧ ವಿಷಯ ಮಂಡಿಸಿದೆ ಎಂದು ಸಭೆಗೆ ವಿವರಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಕಾಲುವೆಯಿಂದ ಪ್ರಾದೇಶಿಕ ಕೇಂದ್ರದ ಕಟ್ಟಡಕ್ಕೆ ಆಗುವ ಸಮಸ್ಯೆ ಬಗ್ಗೆ ವಿವರವನ್ನು ಕೇಳಿದರು.

ಕುಲಸಚಿವರು ಮಾತನಾಡಿ, ಕಟ್ಟಡಕ್ಕೆ ಯಾವುದೇ ಸಮಸ್ಯೆ ಇರುವುದಿಲ್ಲ, ಕಾಲುವೆ ಬಹಳ ಆಳವಿದ್ದು, ಮಳೆಯಿಂದಾಗಿ ಸೇತುವೆಯು ಕೊಚ್ಚಿಕೊಂಡು ಹೋಗಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ steel bridge ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ. ಹಾಗಾಗಿ, ಶಾಶ್ವತವಾಗಿ ಸೇತುವೆಯನ್ನು ನಿರ್ಮಿಸಬೇಕಾಗಿದೆ ಎಂದು ಸಭೆಗೆ ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಸ್ಥಳೀಯ ಪುರಸಭೆಯವರು ಈ ಕೆಲಸವನ್ನು ವಹಿಸಿಕೊಳ್ಳುವುದರ ಬಗ್ಗೆ, ಸೇತುವೆಯನ್ನು ಮೊದಲು ನಿರ್ಮಾಣ ಮಾಡಿದವರ ಬಗ್ಗೆ, ವಿದ್ಯಾರ್ಥಿಗಳ ಸಂಖ್ಯೆ ಕುರಿತು ಮಾಹಿತಿಯನ್ನು ನೀಡುವಂತೆ ಕೋರಿದರು.

ಕುಲಪತಿಗಳು ಕುಲಸಚಿವರು

ಕುಲಸಚಿವರು ಮಾತನಾಡಿ, ಕಟ್ಟಡದ ಮುಂದೆ ಇರುವ ಕಾಲುವೆಗೆ, ಸೇತುವೆಯನ್ನು 4–5 ವರ್ಷಗಳ ಹಿಂದೆಯೇ ಮೊದಲು ಕೂಡ ವಿ.ವಿ. ನಿಲಯವೇ ನಿರ್ಮಿಸಿರುವುದಾಗಿ ತಿಳಿಸಿದರು. ಕಳೆದ 5–6 ತಿಂಗಳಿಂದ ನಗರಪಾಲಿಕೆಯವರು ಸದರಿ ಕೆಲಸವನ್ನು ಮಾಡುವರೆಂದು ಕಾಯಲಾಯಿತು, ಇದು ಸಾಧ್ಯವಾಗದ ಕಾರಣ ಮತ್ತು Urban Development ನವರು ಸೇತುವೆಯನ್ನು ವಿ.ವಿ ಯವರೇ ನಿರ್ಮಿಸಲಿ ಎಂದು ತಿಳಿಸಿದ್ದರಿಂದ ಶಾಶ್ವತ ಸೇತುವೆಯನ್ನು ನಿರ್ಮಿಸಲು ನಿರ್ಧರಿಸಲಾಯಿತು. ಸದರಿ ಕೇಂದ್ರದಲ್ಲಿ ಸುಮಾರು 2000 ವಿದ್ಯಾರ್ಥಿಗಳಿದ್ದು, ಇವರುಗಳಿಗೆ ಪರೀಕ್ಷೆಯನ್ನು, ತರಗತಿಗಳನ್ನು ನಡೆಸಲಾಗುತ್ತಿದೆ ಮತ್ತು ಚಿಕ್ಕಮಗಳೂರಿನ medical college ನವರು ತರಗತಿಗಳಿಗಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ ಎಂದು ಸಭೆಗೆ ವಿವರಿಸಿದರು.

*********

**<u>ತೀರ್ಮಾನ :</u>**

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಚಿಕ್ಕಮಗಳೂರು ಪ್ರಾದೇಶಿಕ ಕೇಂದ್ರದಲ್ಲಿ ಶಾಸ್ವತ ಸೇತುವೆಯಾದ RCC BOX CULVERT/ BRIDGE ಅನ್ನು ನಿರ್ಮಿಸುವ ಸಲುವಾಗಿ ನಿಯಮಾನುಸಾರ e-procurement ಮೂಲಕ tender ಆಹ್ವಾನಿಸಿ ಕೆಲಸ ನಿರ್ವಹಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

********

## <u>ವಿಷಯ ಸಂಖ್ಯೆ:172.12</u>

**ವಿಷಯ: ವಿವಿನಿಲಯದ ಮುಕ್ತ ಗಂಗೋತ್ರಿ ಆವರಣದಲ್ಲಿ ಇರುವ ವಿವಿಧ ಸಭಾಂಗಣಗಳು ಮತ್ತು ಕಟ್ಟಡಗಳಿಗೆ ಬಾಡಿಗೆಯ ದರಗಳನ್ನು ನಿಗದಿ ಪಡಿಸುವ ಬಗೆಗೆ.**

*******

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮುಕ್ತ ಗಂಗೋತ್ರಿ ಆವರಣದಲ್ಲಿರುವ ಘಟಿಕೋತ್ಸವ ಭವನ, ಕಾವೇರಿ ಸಭಾಂಗಣ, ಗಂಗಾ ಸಭಾಂಗಣ, ನಳ ಕಟ್ಟಡ, ದಮಯಂತಿ ಕಟ್ಟಡ, ಅತಿಥಿಗೃಹ, ಪುರುಷರ ಮತ್ತು ಮಹಿಳೆಯರ ವಿದ್ಯಾರ್ಥಿ ನಿಲಯಗಳ ಕಟ್ಟಡಗಳಿದ್ದು ಇವುಗಳನ್ನು ಇತರೇ ಸಂಸ್ಥೆಯವರಿಗೆ ಬಾಡಿಗೆ ಆಧಾರದ ಮೇಲೆ ನೀಡಲು ಈ ಹಿಂದೆ ದಿ:05.12.2018ರಂದು ವಿವಿನಿಲಯವು ಬಾಡಿಗೆಯನ್ನು ನಿಗದಿ ಪಡಿಸಿ ಆದೇಶವನ್ನು ಹೊರಡಿಸಲಾಗಿರುತ್ತದೆ.

**ಕುಲಪತಿಗಳು** **ಕುಲಸಚಿವರು**

| ಕ್ರ.ಸಂ. | ಸಭಾಂಗಣ/ಕಟ್ಟಡಗಳು | ಪ್ರಸ್ತುತ ನಿಗದಿ ಪಡಿಸಲಾಗಿರುವ ಬಾಡಿಗೆಯ ವಿವರ | ನಿಗದಿ ಪಡಿಸಬಹುದಾದ ಬಾಡಿಗೆಯ ವಿವರ |
|---|---|---|---|
| 01 | ಘಟಿಕೋತ್ಸವ ಭವನ | ರೂ. 1,50,000=00+GST (ಒಂದು ದಿನಕ್ಕೆ) | ರೂ. 1,50,000=00+GST (ಒಂದು ದಿನಕ್ಕೆ) |
| 02 | ಕಾವೇರಿ ಸಭಾಂಗಣ | ರೂ. 20,000=00+GST (ಒಂದು ದಿನಕ್ಕೆ) | ರೂ. 25,000=00+GST (ಒಂದು ದಿನಕ್ಕೆ) |
| 03 | ಗಂಗಾ ಸಭಾಂಗಣ | ರೂ. 12,000=00+GST (ಒಂದು ದಿನಕ್ಕೆ) | ರೂ. 15,000=00+GST (ಒಂದು ದಿನಕ್ಕೆ) |
| 04 | ನಳ ಸಭಾಂಗಣ ಹಾಗೂ ಇತರೇ ತರಗತಿ ಕೊಠಡಿಗಳು | ರೂ. 2,000=00+GST (ಒಂದು ದಿನಕ್ಕೆ) | ರೂ. 5,000=00+GST (ಒಂದು ದಿನಕ್ಕೆ) |
| 05 | ಪುರುಷರ ಮತ್ತು ಮಹಿಳೆಯರ ವಿದ್ಯಾರ್ಥಿನಿಲಯ | ರೂ. 100=00 (ಓರ್ವ ವಿದ್ಯಾರ್ಥಿಗೆ ಒಂದು ದಿನಕ್ಕೆ) | ರೂ. 200=00+GST (ಓರ್ವ ವಿದ್ಯಾರ್ಥಿಗೆ ಒಂದು ದಿನಕ್ಕೆ) |
| 06 | ಕ್ರೀಡಾಂಗಣ | ರೂ. 7,500=00+GST | ರೂ. 10,000=00+GST (ಒಂದು ದಿನಕ್ಕೆ) |
| 07 | a)ಅತಿಥಿಗೃಹ VVIP ಕೊಠಡಿ (Official visit) | ರೂ. 750=00+ GST | ರೂ. 800=00+ GST |
| | b)ಅತಿಥಿಗೃಹ VVIP ಕೊಠಡಿ (Non Official visit) | ರೂ. 1,500=00+ GST | ರೂ. 1,500=00+ GST |
| 08 | a)ಅತಿಥಿಗೃಹಸಾಮಾನ್ಯ ಕೊಠಡಿ Per person=250/- per day (Official visit) | ರೂ. 400=00 ಕುಲಪತಿಗಳು | ರೂ. 500=00+ GST |
| | b)ಅತಿಥಿಗೃಹಸಾಮಾನ್ಯ ಕೊಠಡಿ (Non Official visit) | ರೂ. 800=00 | ರೂ. 800=00+ GST |
| | c)ಅತಿಥಿಗೃಹ ಡಬಲ್ ಬೆಡ್ ಕೊಠಡಿ (Official visit) Per person=250/- per day | ರೂ. 600=00 | ರೂ. 750=00+ GST |
| | d)ಅತಿಥಿಗೃಹ ಡಬಲ್ ಬೆಡ್ ಕೊಠಡಿ (Non Official visit) | ರೂ. 900=00 | ರೂ. 1,000=00+ GST |
| | e) ಅತಿಥಿಗೃಹ ಸಭಾಂಗಣ ಕೊಠಡಿ | ರೂ. 4000=00+ GST | ರೂ. 5,000=00+ GST |
| 09 | ವಿವಿನಿಲಯದ ಅವರಣ / ಕಟ್ಟಡಗಳು | ರೂ. 25,000=00+GST (ಒಂದು ದಿನಕ್ಕೆ) | ರೂ. 50,000=00+GST (ಒಂದು ದಿನಕ್ಕೆ) |

ಕುಲಪತಿಗಳು

ಕುಲಸಚಿವರು

ಪ್ರಸ್ತುತ ಸದರಿ ಸಭಾಂಗಣಗಳ ನಿರ್ವಹಣಾ ವೆಚ್ಚವು ಅಧಿಕವಾಗಿರುವುದರಿಂದ ಹಿಂದೆ ನಿಗದಿ ಪಡಿಸಿರುವ ಬಾಡಿಗೆಯ ದರವನ್ನು ಪರಿಷ್ಕರಿಸಿ ನೂತನ ಬಾಡಿಗೆಯನ್ನು ನಿಗದಿ ಪಡಿಸುವ ಬಗ್ಗೆ ಮತ್ತು ಘಟಿಕೋತ್ಸವ ಭವನ, ಕಾವೇರಿ ಸಭಾಂಗಣ, ಗಂಗಾ ಸಭಾಂಗಣ, ನಳ ಕಟ್ಟಡಗಳನ್ನು ಶೈಕ್ಷಣಿಕ ಚಟುವಟಿಕೆಗಳ ಉದ್ದೇಶಕ್ಕಗಿ ಮಾತ್ರ ನೀಡುವ ಬಗೆಗಿನ ವಿಷಯನ್ನು ವ್ಯವಸ್ಥಾಪನ ಮಂಡಳಿಯ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**********

ಸದರಿ ವಿಷಯದ ಬಗ್ಗೆ ಕುಲಸಚಿವರು ಮಾತನಾಡಿ, ವಿ.ವಿ ನಿಲಯದ ಆವರಣದಲ್ಲಿ 09 ಕಟ್ಟಡಗಳಿರುವುದಾಗಿ,. ಅದರಲ್ಲಿ ಘಟಿಕೋತ್ಸವ ಭವನವು ಸಂಪೂರ್ಣ AC ವ್ಯವಸ್ಥೆಯನ್ನು ಹೊಂದಿದ್ದು, ಸುಮಾರು 1800 ಮಂದಿ ಕುಳಿತು ವೀಕ್ಷಣೆ ಮಾಡಬಹುದಾಗಿದೆ ಎಂದು ತಿಳಿಸಿದರು. ಕೆಲ ದಿನಗಳ ಹಿಂದೆ tiger reserve association ನವರು 50 ವರ್ಷಗಳ ಹುಲಿ ಯೋಜನೆಯ ಸ್ಮರಣಾರ್ಥವಾಗಿ ವಿ.ವಿಯ ಘಟಿಕೋತ್ಸವ ಭವನದಲ್ಲಿ ಸಮಾರಂಭವನ್ನು ನಡೆಸಿದ್ದು, ಸದರಿ ಕಾರ್ಯ ಕ್ರಮದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಇದು ನಮ್ಮ ವಿ.ವಿ.ನಿಲಯಕ್ಕೆ ಒಂದು ಹೆಮ್ಮೆಯ ವಿಷಯವು ಕೂಡ ಎಂದು ಸಭೆಯಲ್ಲಿ ತಿಳಿಸಿದರು.

ನಂತರ ಮಾತನಾಡಿದ ಕುಲಸಚಿವರು, ವಿ.ವಿ. ನಿಲಯದ ಕಟ್ಟಡಗಳನ್ನು Corporate sectors, Medical College, Engineering Colleges, Schools and Colleges ಇವರುಗಳು ವಾರ್ಷಿಕೋತ್ಸವ ಸಮಾರಂಭಗಳಿಗೆ ಘಟಿಕೋತ್ಸವ ಹಾಗೂ ಇತರೆ ಕಟ್ಟಡಗಳನ್ನು ಬಾಡಿಗೆಗೆ ಪಡೆಯುತ್ತಿದ್ದು, ವಿ.ವಿ.ನಿಲಯವು ಸರ್ಕಾರಿ ವಲಯದವರಿಗೆ 1 ಲಕ್ಷ, ಖಾಸಗಿ ವಲಯದವರಿಗೆ 1.5 ಲಕ್ಷ ರೂಗಳನ್ನು ದರವಾಗಿ ನಿಗದಿಪಡಿಸಲಾಗಿತ್ತು. ಸುಮಾರು 5 ವರ್ಷಗಳಿಂದ ವಿ.ವಿ. ನಿಲಯವು ತನ್ನ ಕಟ್ಟಡಗಳಿಗೆ ಒಂದೇ ದರದಲ್ಲಿ ಬಾಡಿಗೆಯನ್ನು ಪಡೆಯುತ್ತಿದ್ದು, ಪ್ರಸ್ತುತ, ಬಾಡಿಗೆ ದರವನ್ನು ಹೆಚ್ಚಿಸಲು ವಿಷಯ ಮಂಡಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಸದರಿ ವಿಷಯದ ಪ್ರಸ್ತಾವನೆಯನ್ನು ಪರಿಶೀಲಿಸಿ, ಕ್ರಮ ಸಂಖ್ಯೆ 5 ನ್ನು ಹೊರತು ಪಡಿಸಿ ಉಳಿದವು ಸರಿ ಇರುವುದಾಗಿ ತಿಳಿಸಿದರು. ಕ್ರಮ ಸಂಖ್ಯೆ 5 ರಲ್ಲಿ ವಿದ್ಯಾರ್ಥಿಗಳಿಗೆ ತಲಾ ಒಬ್ಬರಿಗೆ ರೂ. 100/- ರಿಂದ ರೂ.200/- ಕ್ಕೆ ಹೆಚ್ಚಿಸಿರುವುದು ಸೂಕ್ತವಲ್ಲವೆಂದು,. ಇದರಿಂದಾಗಿ ವಿದ್ಯಾರ್ಥಿಗಳಿಗೆ ಹೊರೆಯಾಗುವುದೆಂದು ತಿಳಿಸಿದರು. ಪುರುಷ ವಿದ್ಯಾರ್ಥಿಗಳಿಗೆ ಒಂದು ರೀತಿ ದರ, ಮಹಿಳಾ ವಿದ್ಯಾರ್ಥಿಗಳಿಗೆ ಒಂದು ರೀತಿ ದರ ನಿಗದಿ ಪಡಿಸುವಂತೆ ಸಲಹೆ ನೀಡಿದರು.

ಕುಲಸಚಿವರು ಮಾತನಾಡಿ, ವಿ.ವಿಯಲ್ಲಿ ಸಂಪರ್ಕ ಕಾರ್ಯಕ್ರಮಗಳು ನಡೆಯುವಾಗ, ಪರೀಕ್ಷೆಗಳು ನಡೆಯುವಾಗ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು 2-3 ದಿವಸಗಳು ಉಳಿದುಕೊಳ್ಳುವುದಾಗಿ ತಿಳಿಸಿ, ವಿದ್ಯಾರ್ಥಿಗಳಲ್ಲಿ ಬೇದಭಾವ ಮಾಡುವುದು ಸರಿಯಲ್ಲವೆಂದು ತಿಳಿಸಿ ದರವನ್ನು ರೂ. 100/- ರಿಂದ ರೂ.150/- ಕ್ಕೆ ಹೆಚ್ಚಿಸಲು ಅನುಮತಿ ನೀಡುವಂತೆ ಕೋರಿದರು.

**ಕುಲಪತಿಗಳು** | **ಕುಲಸಚಿವರು**

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ತಲಾ ರೂ. 150/- ಗಳಿಗೆ ದರವನ್ನು ನಿಗದಿಪಡಿಸುವಂತೆ ಸೂಚಿಸಿದರು. ಮುಂದುವರೆದು ಕ್ರಮ ಸಂಖ್ಯೆ 9 ರಲ್ಲಿ ವಿ.ವಿ.ನಿಲಯದ ಆವರಣದ ಕಟ್ಟಡಕ್ಕೆ ಎರಡು ಪಟ್ಟು ದರವನ್ನು ನಿಗದಿಪಡಿಸಿರುವುದರ ಬಗ್ಗೆ ವಿವರಣೆ ಕೋರಿದರು.

ಕುಲಸಚಿವರು ಮಾತನಾಡಿ, ವಿ.ವಿ. ನಿಲಯದ ಆವರಣದಲ್ಲಿ ಗಂಗಾ, ಕಾವೇರಿ ಮತ್ತು ನಳ ಕಟ್ಟಡಗಳಿದ್ದು, ಸಣ್ಣ ಮಟ್ಟದ ಸಭೆ, ಕಾರ್ಯಾಗಾರ, ಸಮ್ಮೇಳನ ಇವುಗಳನ್ನು ನಡೆಸಲು ಈ ಕಟ್ಟಡಗಳನ್ನು ಬಾಡಿಗೆಗೆ ಪಡೆಯುತ್ತಾರೆಂದು, ಸದರಿ ಕಟ್ಟಡಗಳಿಗೆ ಬಹಳ ಬೇಡಿಕೆ ಇರುವುದಾಗಿಯೂ ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಸದರಿ ಕಟ್ಟಡಗಳ ವಾರ್ಷಿಕ ಆದಾಯ ಮತ್ತು ಸರಾಸರಿ ಮೊತ್ತದ ಬಗ್ಗೆ ಮಾಹಿತಿ ಕೋರಿದರು.

ಕುಲಸಚಿವರು ಮಾತನಾಡಿ, ಎಲ್ಲಾ ಕಟ್ಟಡಗಳಿಂದ ಒಟ್ಟು ವಾರ್ಷಿಕ ಆದಾಯವು ಸುಮಾರು 15 ಲಕ್ಷಗಳಾಗುತ್ತದೆ, ಸಾರ್ವಜನಿಕರು ಬೇರೆ ಬೇರೆ ಕಾರ್ಯಕ್ರಮಗಳಿಗೆ ಕಟ್ಟಡಗಳನ್ನು ಬಾಡಿಗೆಗೆ ಪಡೆಯುತ್ತಾರೆ. ಕೇವಲ ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ಕಟ್ಟಡಗಳು ಉಪಯೋಗಿಸುವ ಸಲುವಾಗಿ ಅನುಮೋದಿಸಿದಲ್ಲಿ ಅನುಕೂಲವಾಗುತ್ತದೆ ಎಂದು ತಿಳಿಸಿದರು. ವಿವಿಧ ರೀತಿಯ ಕಾರ್ಯಕ್ರಮಗಳಿಗೆ ಉಪಯೋಗಿಸಲು ಕಟ್ಟಡಗಳನ್ನು ನೀಡಿದ್ದು, ವಿ.ವಿ. ನಿಲಯವು ಈಗಾಗಲೇ ತೊಂದರೆಯನ್ನು ಎದುರಿಸಿದೆ ಎಂದು ತಿಳಿಸಿದರು. ಸ್ಥಳೀಯ ಕಾರ್ಯಕ್ರಮಗಳನ್ನು ತಡೆಗಟ್ಟಲು ಬಾಡಿಗೆಯ ದರವನ್ನು ಹೆಚ್ಚಿಸಿದ್ದಲ್ಲಿ ಇಂತಹ ಪ್ರಸಂಗಗಳನ್ನು ತಡೆಗಟ್ಟಲು ಸಾಧ್ಯವಾಗುವುದೆಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ವಿ.ವಿ. ನಿಲಯದ ಕಟ್ಟಡಗಳನ್ನು ಕೇವಲ ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ಬಾಡಿಗೆಗೆ ನೀಡಲಾಗುವುದೆಂದು ಆದೇಶವನ್ನು ಹೊರಡಿಸುವಂತೆ ಸಲಹೆ ನೀಡಿದರು.

********

ತೀರ್ಮಾನ :

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಕರಾಮುವಿಯ ಆವರಣದಲ್ಲಿರುವ ಘಟಿಕೋತ್ಸವ ಭವನ, ಕಾವೇರಿ ಸಭಾಂಗಣ, ಗಂಗಾ ಸಭಾಂಗಣ, ನಳ ಕಟ್ಟಡ, ದಮಯಂತಿ ಕಟ್ಟಡಗಳನ್ನು ಕೇವಲ ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ಬಾಡಿಗೆಗೆ ನೀಡಲು ಹಾಗೂ ಕ್ರಮ ಸಂಖ್ಯೆ 1,2,3,4,6,7,8 ಮತ್ತು 9 ರ ವಿಷಯವಾಗಿ ಈ ಹಿಂದೆ ನಿಗದಿ ಪಡಿಸಿರುವ ಬಾಡಿಗೆಯ ದರವನ್ನು ಪರಿಷ್ಕರಿಸಿ ನೂತನ ಬಾಡಿಗೆಯನ್ನು ನಿಗದಿ ಪಡಿಸುವುದಕ್ಕೆ ಅನುಮೋದಿಸಿದ್ದು, ಕ್ರಮ ಸಂಖ್ಯೆ 5 ರ ವಿಷಯವಾದ ಅತಿಥಿಗೃಹದ ಬಾಡಿಗೆ ದರವನ್ನು ಪ್ರತಿ ವಿದ್ಯಾರ್ಥಿಗೆ ರೂ. 150/- ಗಳಿಗೆ ನಿಗದಿ ಪಡಿಸಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

*******

ಕುಲಪತಿಗಳು ಕುಲಸಚಿವರು

**<u>ವಿಷಯ ಸಂಖ್ಯೆ: 172.13</u>**

**ವಿಷಯ:** ಶ್ರೀ ಬಸನಗೌಡ ಗೌಡರ್, ಪ್ರಥಮ ದರ್ಜೆ ಗುಮಾಸ್ತ, ಕರಾಮುವಿ, ಪ್ರಾದೇಶಿಕ ಕೇಂದ್ರ, ಬೆಳಗಾವಿ, ಇವರು ಸ್ವಯಂ ನಿವೃತ್ತಿ (Voluntary Retirement) ಕೋರಿ ಮನವಿ ಸಲ್ಲಿಸಿರುವ ಕುರಿತು.

******

ಶ್ರೀ ಬಸನಗೌಡ ಗೌಡರ್, ಪ್ರಥಮ ದರ್ಜೆ ಗುಮಾಸ್ತ, ಕರಾಮುವಿ, ಪ್ರಾದೇಶಿಕ ಕೇಂದ್ರ, ಬೆಳಗಾವಿ, ಇವರು ವಿ.ವಿ ಆದೇಶ ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/ಡಿಇಓನೇ/10/534/07-08,ದಿನಾಂಕ21.11.2007ರ ಆದೇಶದನ್ವಯ ನೇರ ನೇಮಕಾತಿ ಅಡಿಯಲ್ಲಿ **ಡೇಟಾ ಎಂಟ್ರಿ ಆಪರೇಟರ್** ಹುದ್ದೆಗೆ ನೇಮಕಾತಿ ಹೊಂದಿದ್ದು, ಸದರಿಯವರು ದಿನಾಂಕ:14.12.2007ರಂದು ಕರ್ತವ್ಯದ ಮೇಲೆ ವರದಿ ಮಾಡಿಕೊಂಡಿದ್ದು, ಪ್ರಸ್ತುತ ಪ್ರಥಮ ದರ್ಜೆ ಗುಮಾಸ್ತರಾಗಿ ಪದೋನ್ನತಿ ಹೊಂದಿದ್ದು, ವೇತನ ನಿಗಧಿಪಡಿಸಿರುವುದಿಲ್ಲ ಹಾಗೂ ಸದರಿಯವರು ನೂತನ ಪಿಂಚಣಿ ಯೋಜನೆಗೆ ಒಳಪಟ್ಟಿರುತ್ತಾರೆ.

ಶ್ರೀ ಬಸನಗೌಡ ಗೌಡರ್, ಇವರು ದಿನಾಂಕ:31.03.2023ರ ಪತ್ರದ ಮೂಲಕ **ಆರೋಗ್ಯ ಮತ್ತು ಕೌಟುಂಬಿಕ ಸಮಸ್ಯೆಗಳ ಕಾರಣ ತೃಪ್ತಿಕರ ಸೇವೆಯನ್ನು ನೀಡಲು ಆಗುತ್ತಿಲ್ಲ,** ಆದ್ದರಿಂದ ಸ್ವಯಂ ನಿವೃತ್ತಿ ಅಡಿ ಸ್ವಯಂ ನಿವೃತ್ತಿಯ ಆದೇಶವನ್ನು ನೀಡಲು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ **ಕರ್ನಾಟಕ ಸಿವಿಲ್‌ಸೇವಾ ನಿಯಮಗಳ ನಿಯಮ-285(2) ರನ್ವಯ 15 ವರ್ಷಗಳಿಗೆ ಕಡಿಮೆ ಇಲ್ಲದೆ ಅರ್ಹತಾದಾಯಕ ಸೇವೆಯನ್ನು ಪೂರ್ಣಗೊಳಿಸಿದ ನಂತರ ಸ್ವಂತ ಇಚ್ಛೆಯಿಂದ ವಿಶ್ರಾಂತಿಯನ್ನು ಪಡೆಯಲು ಇರುವ ಷರತ್ತುಗಳಿಗೊಳಪಟ್ಟು** ಸ್ವಯಂ ನಿವೃತ್ತಿ (Voluntary Retirement) ಅಂಗೀಕಾರಕ್ಕಾಗಿ ನೇಮಕಾತಿ ಪ್ರಾಧಿಕಾರವಾದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

*********

ಕುಲಸಚಿವರು ಮಾತನಾಡಿ, ಶ್ರೀ ಬಸನಗೌಡ ಗೌಡರ್, ಪ್ರಥಮ ದರ್ಜೆ ಗುಮಾಸ್ತ, ಕರಾಮುವಿ, ಪ್ರಾದೇಶಿಕ ಕೇಂದ್ರ, ಬೆಳಗಾವಿ ಇವರು ಸ್ವಯಂ ನಿವೃತ್ತಿ (Voluntary Retirement) ಕೋರಿ ಮನವಿ ಸಲ್ಲಿಸಿರುತ್ತಾರೆ, ಸದರಿಯವರು ಒಂದು ಪ್ರಾದೇಶಿಕ ಕೇಂದ್ರದಿಂದ ಮತ್ತೊಂದು ಪ್ರಾದೇಶಿಕ ಕೇಂದ್ರಕ್ಕೆ ವರ್ಗಾವಣೆಗೊಂಡ ನಂತರ ಅಲ್ಲಿ ಕೆಲಸವನ್ನು ನಿರ್ವಹಿಸುವಲ್ಲಿ ವಿಫಲರಾಗಿರುತ್ತಾರೆ. ವರ್ಗಾವಣೆಯಾಗಿರುವ ವಿಷಯದ ಬಗ್ಗೆ ಉದ್ದೇಶಪೂರ್ವಕವಾಗಿ ತನ್ನನ್ನು ವರ್ಗಾಯಿಸಿರುತ್ತಾರೆ ಎಂದು court ನಲ್ಲಿ case ದಾಖಲಿಸಿರುತ್ತಾರೆ. ಈ ಹಿಂದೆಯೂ ಸದರಿಯವರ ಬಗ್ಗೆ ದೂರು ದಾಖಲಿಸಿತ್ತು. ಕೆಲಸಕ್ಕೆ ಸರಿಯಾಗಿ ಬರದಿರುವುದು, ಕೆಲಸ ಸರಿಯಾಗಿ ನಿರ್ವಹಿಸದಿರುವುದು ಈ ತರಹದ ದೂರುಗಳು ಇವರ ಮೇಲೆ ಇದೆ ಎಂದು ಸಭೆಗೆ ತಿಳಿಸಿದರು. ಸದರಿ ನೌಕರರು ಪ್ರಸ್ತುತ, ಸ್ವಯಂ ನಿವೃತ್ತಿ (Voluntary Retirement) ಕೋರಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು.

ಕುಲಪತಿಗಳು

ಕುಲಸಚಿವರು

ಮಾನ್ಯ ಕುಲಪತಿಗಳು ಮಾತನಾಡಿ, ಪ್ರಾದೇಶಿಕ ನಿರ್ದೇಶಕರು ಕೆಲಸ ನಿರ್ವಹಿಸಲು computer ಅನ್ನು ಚಾಲನೆ ಮಾಡುವಾಗ ಕೆಲವು file ಗಳು delete ಆಗಿರುವುದು ಕಂಡು ಬಂದಿರುವ ವಿಷಯವನ್ನು ಸಭೆಯಲ್ಲಿ ತಿಳಿಸಿದರು.

ಕುಲಸಚಿವರು ಮಾತನಾಡಿ, ಸದರಿಯವರು ಒಳ್ಳೆ ಕೆಲಸದವರಾಗಿ ಸಾಬೀತು ಪಡೆಸಿದ್ದರೆ, ಇವರನ್ನು ಕರೆಸಿ ಸ್ವಯಂ ನಿವೃತ್ತಿ ಕೋರಿಕೆಯನ್ನು ಹಿಂಪಡೆಯಲು ತಿಳಿಸಲಾಗುತ್ತಿತ್ತು. ಆದರೆ, ಇವರು ಕೆಲಸದಲ್ಲಿ ಅಸಮರ್ಥರೆಂದು ಸಾಬೀತು ಪಡಿಸಿಕೊಂಡಿರುವುದರಿಂದ ಸದರಿಯವರಿಗೆ ವೇತನ ನಿಗಿದಪಡಿಸಿರುವುದಿಲ್ಲ (pay fixation) ಎಂದು ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಸದರಿಯವರಿಗೆ NPS ಅಳವಡಿಸಿಕೊಂಡಿರುವ ಬಗ್ಗೆ ಮಾಹಿತಿ ನೀಡುವಂತೆ ಕೋರಿದರು.

ಕುಲಸಚಿವರು ಮಾತನಾಡಿ, ಸದರಿಯವರು NPS ಯೋಜನೆಗೆ ಒಳಪಟ್ಟಿದ್ದು, ಇವರ ವೇತನದಿಂದ ಮಾಹೆಯಾನ ಕಾಟಾಯಿಸಿ ಜಮೆಯಾಗುತ್ತಿದೆ ಎಂದು ತಿಳಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಇವರು ಮಾತನಾಡಿ, ಸದರಿಯವರಿಗೆ ಕಾರಣ ಕೇಳಿ Notice ಅನ್ನು ನೀಡಿ ಮತ್ತು ಇವರ ಹೆಸರಿನಲ್ಲಿ ಬೇಬಾಕಿ ಇರುವ ಬಗ್ಗೆ ಖಚಿತಪಡಿಸಿಕೊಂಡು ಸದರಿಯವರಿಗೆ ಸ್ವಯಂ ನಿವೃತ್ತಿ (Voluntary Retirement) ಯನ್ನು ನೀಡಬಹುದು ಎಂದು ಅಭಿಪ್ರಾಯಿಸಿದರು.

*****

<u>ತೀರ್ಮಾನ :</u>

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಶ್ರೀ ಬಸನಗೌಡ ಗೌಡರ್, ಪ್ರಥಮ ದರ್ಜೆ ಗುಮಾಸ್ತ, ಕರಾಮುವಿ, ಪ್ರಾದೇಶಿಕ ಕೇಂದ್ರ, ಬೆಳಗಾವಿ, ಇವರಿಗೆ ಕಾರಣ ಕೇಳಿ ನೋಟಿಸ್ ನೀಡಿ, ಇವರ ಹೆಸರಿನಲ್ಲಿ ಬೇಬಾಕಿ ಇದ್ದಲ್ಲಿ ಮೊತ್ತವನ್ನು ಮರುಪಾವತಿಸಿಕೊಂಡು ಸದರಿಯವರಿಗೆ ಸ್ವಯಂ ನಿವೃತ್ತಿ (Voluntary Retirement) ಯನ್ನು ನೀಡಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

*********

ಕುಲಪತಿಗಳು

ಕುಲಸಚಿವರು

ವಿಷಯ ಸಂಖ್ಯೆ: 172.14

**ವಿಷಯ:** ವಿಶ್ವವಿದ್ಯಾನಿಲಯದ ಪರಿನಿಯಮ KSOU (Creation of Posts & Absorption of Temporary Teachers)-Statutes 2012 ರ ಮೂಲಕ ವಿಲೀನಗೊಂಡಿರುವ ಸಹಾಯಕ ಪ್ರಾಧ್ಯಾಪಕರುಗಳಿಗೆ ವಿವಿಧ ಆರ್ಥಿಕ ಸೌಲಭ್ಯಗಳನ್ನು ವಿಸ್ತರಿಸಿರುವ ಕುರಿತು.

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2012ರ ಪೂರ್ವದಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದವರುಗಳನ್ನು KSOU (Creation of Posts & Absorption of Temporary Teachers)-Statutes 2012 ರ ಪರಿನಿಯಮವನ್ನು ರಚಿಸಿ ಸಹಾಯಕ ಪ್ರಾಧ್ಯಾಪಕರನ್ನಾಗಿ ವಿಲೀನಗೊಳಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ನಡೆದಿದೆ ಎನ್ನಲಾದ ವಿವಿಧ ಅಕ್ರಮಗಳ ಕುರಿತು ಘನತೆವೆತ್ತ ಕುಲಾಧಿಪತಿಗಳಿಂದ ತನಿಖೆಗೆ ನೇಮಕಗೊಂಡಿದ್ದ ಮಾನ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಜಸ್ಟೀಸ್ ಡಾ.ಕೆ.ಭಕ್ತವತ್ಸಲ, ಏಕಸದಸ್ಯ ಸತ್ಯಶೋಧನಾ ಸಮಿತಿಗೆ(OMFFC) ಘನತೆವೆತ್ತ ಕುಲಾಧಿಪತಿಗಳು ವಹಿಸಲಾದ ಪ್ರಕರಣಗಳಲ್ಲಿ "KSOU (Creation of Posts & Absorption of Temporary Teachers) – Statutes 2012 ಪರಿನಿಯಮದ ಮೂಲಕ ಸೃಜನೆಗೊಂಡು ಖಾಯಂ ಆಗಿರುವ 28 ಉಪನ್ಯಾಸಕರ ಪ್ರಕರಣವೂ" ಒಂದಾಗಿರುತ್ತದೆ. ಸದರಿ ವರದಿಯಲ್ಲಿ 22 ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿಗೆ ಸಂಬಂಧಿಸಿದಂತೆ "Statute is Illegal" ಎಂದು ಹಾಗೂ ಸದರಿಯವರುಗಳನ್ನು ಸೇವೆಯಿಂದ ವಜಾಗೊಳಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ವರದಿಗೆ ಅನುಗುಣವಾಗಿ ಘನತೆವೆತ್ತ ಕುಲಾಧಿಪತಿಗಳು ದಿನಾಂಕ:03.11.2015 ರ ಪತ್ರದಲ್ಲಿ ಸದರಿ ಸಹಾಯಕ ಪ್ರಾಧ್ಯಾಪಕರುಗಳಿಗೆ ಸಂಬಂಧಿಸಿದಂತೆ "Steps may be taken to discharge them forthwith" ಎಂದು ಸೂಚಿಸಿರುತ್ತಾರೆ.

ವಿಶ್ವವಿದ್ಯಾನಿಲಯದಲ್ಲಿ ಭಾರತೀಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ (A.G. Audit) ನಡೆಸಿ "KSOU (Creation of Posts & Absorption of Temporary Teachers) – Statutes 2012 ಪರಿನಿಯಮದ ಮೂಲಕ ಸೃಜನೆಗೊಂಡು ವಿಲೀನಗೊಂಡಿರುವ 22 ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿದ್ದು, ಪಾವತಿಸಿರುವ ವೇತನವನ್ನು ವಸೂಲಾತಿಗೆ ಸೂಚಿಸಿರುತ್ತಾರೆ.

ನಂತರ ರಾಜ್ಯ ಲೆಕ್ಕ ಪತ್ರ ಇಲಾಖೆ (Vigilance Audit) ಇವರು ನಡೆಸಿದ ವಿಶೇಷ ಲೆಕ್ಕ ಪರಿಶೋಧನಾ ವರದಿಯಲ್ಲಿಯೂ ಸಹ 22 ಅತಿಥಿ ಉಪನ್ಯಾಸಕರು ವಿದ್ಯಾರ್ಹತೆ ಹೊಂದಿಲ್ಲದಿದ್ದರೂ ನಿಯಮಬಾಹಿರವಾಗಿ ಖಾಯಂಗೊಳಿಸಿ ಲೆಕ್ಕ ಪರಿಶೋಧನೆ ದಿನಾಂಕದವರೆಗೂ ಅತಿಥಿ ಉಪನ್ಯಾಸಕರುಗಳಿಗೆ ಪಾವತಿಸಿರುವ ವೇತನದಿಂದಾಗಿ ವಿಶ್ವವಿದ್ಯಾನಿಲಯಕ್ಕೆ ಹೆಚ್ಚುವರಿ ಆರ್ಥಿಕ ಹೊರೆ ಉಂಟಾಗಿರುತ್ತದೆ ಎಂದು ವರದಿಸಿರುತ್ತಾರೆ.

ಘನತೆವೆತ್ತ ರಾಜ್ಯಪಾಲರ ಸಚಿವಾಲಯದ ದಿನಾಂಕ: 25.01.2019ರ ಪತ್ರದ ನಿರ್ದೇಶನದನ್ವಯ, ಈ ಬಗ್ಗೆ ದಿನಾಂಕ:04.02.2019ರಂದು ನಡೆದ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಗೆ ವಿಷಯ ಮಂಡಿಸಲಾಗಿ, ಸದರಿ ಸಭೆಯ ತೀರ್ಮಾನದನ್ವಯ ವಿಶ್ವವಿದ್ಯಾನಿಲಯವು **ದಿನಾಂಕ:06.02.2019**ರಂದು 22 ಮಂದಿ ಸಹಾಯಕ ಪ್ರಾಧ್ಯಾಪಕರುಗಳಿಗೆ 15 ದಿನಗಳ ಕಾಲಾವಕಾಶ ನೀಡಿ, ಲಿಖಿತ ಹೇಳಿಕೆ ಸಲ್ಲಿಸುವಂತೆ ತಿಳಿಸಿ 'ಷೋಕಾಸ್ ನೋಟಿಸ್' ಜಾರಿಗೊಳಿಸಲಾಗಿರುತ್ತದೆ.

ಸದರಿ ಅಧ್ಯಾಪಕರುಗಳು - ವಿಶ್ವವಿದ್ಯಾನಿಲಯವು ದಿನಾಂಕ:06.02.2019ರಂದು ನೀಡಲಾಗಿದ್ದ **'ಷೋಕಾಸ್ ನೋಟೀಸ್'**ನ ನಂತರ ಎಲ್ಲಾ ಪ್ರಕ್ರಿಯೆಗಳನ್ನು ರದ್ದುಗೊಳಿಸಲು, ಅವರುಗಳ ನೇಮಕಾತಿಯು ನಿಯಮಬದ್ಧ ಹಾಗೂ ಅವರುಗಳು ಯು.ಜಿ.ಸಿ ನಿಯಮಾವಳಿಯನ್ವಯ ಅರ್ಹತೆವುಳ್ಳವರೆಂದು ಪರಿಗಣಿಸಲು, ಅವರುಗಳಿಗೆ 7ನೇ ವೇತನ ಆಯೋಗದ ಶಿಫಾರಸ್ಸುಗಳ ಸೌಲಭ್ಯಗಳನ್ನು ವಿಸ್ತರಿಸಲು, 2018ನೇ ಸಾಲಿನಿಂದ ತಡೆ ಹಿಡಿಯಲಾಗಿರುವ ವಾರ್ಷಿಕ ವೇತನ ಬಡ್ತಿ, ಯು.ಜಿ.ಸಿ ನಿಯಮದನ್ವಯ ಪಿಹೆಚ್.ಡಿ/ ಎಂ.ಫಿಲ್/ಎಲ್ಎಲ್.ಎಂನ ವಿದ್ಯಾರ್ಹತೆಗೆ ಹೆಚ್ಚುವರಿ ವೇತನ ಬಡ್ತಿ ನೀಡಲು ನಿರ್ದೇಶಿಸುವಂತೆ ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪ್ರಕರಣ WP.No.36509-36527/2019, WP.No.51877/2019 & WP.No.49437/2019 ಅನ್ನು ದಾಖಲಿಸಿರುತ್ತಾರೆ.

ಕುಲಪತಿಗಳು ಕುಲಸಚಿವರು

ಸದರಿ ಪ್ರಕರಣದಲ್ಲಿ ಘನತೆವೆತ್ತ ಕುಲಾಧಿಪತಿಗಳು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಮಾನ್ಯ ಕುಲಪತಿಗಳು ಮತ್ತು ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿಯನ್ನು ಕ್ರಮವಾಗಿ (1), (3), (4) ಮತ್ತು (5)ನೇ ಪ್ರತಿವಾದಿಯನ್ನಾಗಿ ಮಾಡಲಾಗಿದ್ದು, ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ:09.09.2019ರಂದು **"......Both parties maintain status quo...."** ಎಂದು ಆದೇಶಿಸಿರುತ್ತದೆ.

ದಿನಾಂಕ: 17.08.2021 ರಂದು 54ನೇ ನಡೆದ ವಿಶೇಷ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆಗೊಂಡ ಇನ್ನಿತರೆ ವಿಷಯಗಳಲ್ಲಿ 22 ಸಹಾಯಕ ಪ್ರಾಧ್ಯಾಪಕರುಗಳ ವಿಷಯವೂ ಸಹ ಚರ್ಚಿತವಾಗಿದ್ದು, ಸದರಿ ಸಭೆಯಲ್ಲಿ 22 ಮಂದಿ ಸಹಾಯಕ ಪ್ರಾಧ್ಯಾಪಕರುಗಳಿಗೆ ನ್ಯಾಯಾಲಯದ ತೀರ್ಪಿಗೆ ಒಳಪಟ್ಟು ಅವರಿಗೆ ನ್ಯಾಯಬದ್ಧವಾಗಿ ಬರಬೇಕಾಗಿರುವ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ಮುಚ್ಚಳಿಕೆ ಬರೆಸಿಕೊಂಡು ವಿಸ್ತರಿಸಲು ತೀರ್ಮಾನವಾಗಿರುತ್ತದೆ.

ಈ ಸಂಬಂಧ ಶ್ರೀಮತಿ ಯಶಸ್ವಿನಿ. ಎಸ್, ನಿಕಟಪೂರ್ವ ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ, ಇವರು ದಿನಾಂಕ: 25.08.2021ರಂದು ವಿಶ್ವವಿದ್ಯಾನಿಲಯಕ್ಕೆ ಪತ್ರವನ್ನು ಸಲ್ಲಿಸಿ, ಸದರಿ ಸಹಾಯಕ ಪ್ರಾಧ್ಯಾಪಕರುಗಳಿಗೆ ಸೇವಾ ಸೌಲಭ್ಯವನ್ನು ವಿಸ್ತರಿಸುವ ಸಂಬಂಧ ನ್ಯಾಯಾಲಯದ ಆದೇಶ ಉಲ್ಲಂಘನೆಯಾಗದಂತೆ ಕಾನೂನು ತಜ್ಞರ ಅಭಿಪ್ರಾಯ ಪಡೆದು ಸೌಲಭ್ಯಗಳನ್ನು ವಿಸ್ತರಿಸುವಂತೆ ತಿಳಿಸಿರುತ್ತಾರೆ.

**ಇದೇ ವಿಷಯವಾಗಿ, ಶ್ರೀ ಕುಮಾರನಾಯಕ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಇವರು ತಮ್ಮ ಅರೆ ಸರ್ಕಾರಿ ಪತ್ರ ದಿನಾಂಕ: 20.09.2021 ವನ್ನು ರವಾನಿಸಿ "ಹಿರಿಯ ಲೆಕ್ಕಾಧಿಕಾರಿಗಳು, ಭಾರತೀಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಇವರು ತಮ್ಮ ಆಡಿಟ್ ತಪಾಸಣಾ ವರದಿಯಲ್ಲಿ ಆಕ್ಷೇಪಿಸಿರುವುದರಿಂದ ಮಾನ್ಯ ನ್ಯಾಯಾಲಯದ ಅಂತಿಮ ತೀರ್ಮಾನವಾಗುವವರೆಗೆ ಯಥಾಸ್ಥಿತಿ ಕಾಪಾಡುವಂತೆ" ತಿಳಿಸಿರುತ್ತಾರೆ.**

ಸದರಿ ವಿಷಯವು **ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯಲ್ಲಿ** (Public Account Committee) **ಚರ್ಚಿತಗೊಂಡು, ಸದರಿ ಸಮಿತಿಯು ದಿನಾಂಕ: 14.12.2021ರಂದು " ಸದರಿ ಸಹಾಯಕ ಪ್ರಾಧ್ಯಾಪಕರುಗಳನ್ನು ಸೇವೆಯಿಂದ ವಜಾಗೊಳಿಸುವಂತೆ" ಶಿಫಾರಸ್ಸು ಮಾಡಿರುತ್ತದೆ.**

ಶ್ರೀಮತಿ ಯಶಸ್ವಿನಿ .ಎಸ್, ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ, ಇವರ ದಿನಾಂಕ: 25.08.2021ರ ಪತ್ರವನ್ನು ಅವಗಾಹಿಸಿ, ನಿಯಮಾನುಸಾರ ಪರಿಶೀಲಿಸಿ, ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 22 ಮಂದಿ ಸಹಾಯಕ ಪ್ರಾಧ್ಯಾಪಕರುಗಳಿಗೆ ವಿವಿಧ ಸೌಲಭ್ಯಗಳನ್ನು ವಿಸ್ತರಿಸುವ ಸಂಬಂಧದಲ್ಲಿ ಕಾನೂನು ಅಭಿಪ್ರಾಯ ಕೋರುವಂತೆ ಹಿಂದಿನ ಮಾನ್ಯ ಕುಲಪತಿಗಳು 'ಟಿಪ್ಪಣಿ' ನೀಡಿದ್ದು, ಈ ಸಂಬಂಧ ವಿ.ವಿ. ವಕೀಲರಾದ ಶ್ರೀ ಪ್ರಸಾದ್ ಹಿರೇಮಠ್, ಬೆಂಗಳೂರು, ಇವರನ್ನು ದಿನಾಂಕ: 22.07.2022 ಪತ್ರದಲ್ಲಿ ಕೋರಲಾಗಿರುತ್ತದೆ.

ಶ್ರೀ ಪ್ರಸಾದ್ ಹಿರೇಮಠ್, ವಕೀಲರು, ಇವರು ದಿನಾಂಕ: 10.08.2022ರಂದು ತಮ್ಮ ಕಾನೂನು ಅಭಿಪ್ರಾಯವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ಸದರಿಯವರು ನೀಡಿರುವ ಅಭಿಪ್ರಾಯವನ್ನು ಮುಂದಿನ ಕ್ರಮಕ್ಕಾಗಿ ಕಡತದಲ್ಲಿ ಮಂಡಿಸಲಾಗಿ ಮಾನ್ಯ ಕುಲಸಚಿವರು (ಕಾ.ಭಾ) ಇವರು " ಸದರಿ ಬೋಧಕ ಸಿಬ್ಬಂದಿಯವರಿಗೆ ಹಳೆ ವೇತನ ಬಾಕಿಯನ್ನು ನೀಡುವ ಬಗ್ಗೆ ಕಾನೂನು ಅಭಿಪ್ರಾಯವನ್ನು ಪರಿಗಣಿಸಿ ಕ್ರಮವಹಿಸುವ ಬಗ್ಗೆ ಸೂಕ್ತ ಆದೇಶಕ್ಕಾಗಿ"ಎಂದು ನಮೂದಿಸಿದ್ದು, ಈ ಹಿಂದಿನ ಮಾನ್ಯ ಕುಲಪತಿಗಳಿಗೆ ಕಡತ ಮಂಡಿಸಲಾಗಿ, ಮಾನ್ಯ ಕುಲಪತಿಗಳು ಕೆಳಕಂಡಂತೆ ಆದೇಶಿಸಿರುತ್ತಾರೆ.

**"Approved to Consider the legal opinion of Sri Prasad Hiremath, Directed to implement as per Legal opinion Date: 10.08.2022. Further it is ordered to release the salary benefit with other allowences to 21 Assistant Professor (Except K.S.Shivakumar) w.e.f 2016 retrospectively".**

**ಕುಲಪತಿಗಳು** **ಕುಲಸಚಿವರು**

**ಈ ಹಿಂದಿನ ಮಾನ್ಯ ಕುಲಪತಿಗಳ ಮೇಲ್ಕಂಡ ಆದೇಶದಂತೆ,**

**(A)** ವಿಶ್ವವಿದ್ಯಾನಿಲಯವು ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/587/2022-23, ದಿನಾಂಕ: 27.09.2022ರಲ್ಲಿ "21 ಸಹಾಯಕ ಪ್ರಾಧ್ಯಾಪಕರುಗಳಿಗೆ 7ನೇ ಪರಿಷ್ಕೃತ ವೇತನ ಮತ್ತು ಇತರೆ ಭತ್ಯೆಗಳನ್ನು ದಿನಾಂಕ: 16.03.2019ರ ಸರ್ಕಾರದ ಆದೇಶದನ್ವಯ ಮತ್ತು ದಿನಾಂಕ: 01.01.2016 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ತಡೆಹಿಡಿಯಲಾಗಿದ್ದ ವಾರ್ಷಿಕ ವೇತನ ಬಡ್ತಿಯನ್ನು ಬಿಡುಗಡೆಗೊಳಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ WP.No.36509-36527/2019, WP.No.51877/2019 & WP.No.49437/2019 ರ ಅಂತಿಮ ಆದೇಶಕ್ಕೆ ಒಳಪಟ್ಟು ಸದರಿ ಸಹಾಯಕ ಪ್ರಾಧ್ಯಾಪಕರುಗಳಿಂದ ಮುಚ್ಚಳಿಕೆ ಪಡೆದು ಪಾವತಿಸಲು ಆದೇಶಿಸಿದ್ದು, ಅದರಂತೆ, ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ಹಣಕಾಸು ವಿಭಾಗದಿಂದ ಪೂರ್ಣ ಪ್ರಮಾಣದಲ್ಲಿ ಬಿಡುಗಡೆಗೊಳಿಸಲಾಗಿರುತ್ತದೆ"

**(B)** ಮಾನ್ಯ ಕುಲಾಧಿಪತಿಗಳ ಕಾರ್ಯಾಲಯದ ಪತ್ರ ದಿನಾಂಕ: 29.09.2022 ರ ಆದೇಶದನ್ವಯ ಹೆಚ್ಚುವರಿಯಾಗಿ ಕುಲಸಚಿವರು ಮತ್ತು ಕುಲಪತಿಯ ಹುದ್ದೆಯಲ್ಲಿ ಕಾರ್ಯಭಾರ ನಿರ್ವಹಿಸುತ್ತಿದ್ದ ಹಣಕಾಸು ಅಧಿಕಾರಿಗಳ ಅವಧಿಯಲ್ಲಿ ಸದರಿ 21 ಸಹಾಯಕ ಪ್ರಾಧ್ಯಾಪಕರುಗಳಲ್ಲಿ ನೇಮಕಾತಿ ಪೂರ್ವದಲ್ಲಿ ಪಿಹೆಚ್.ಡಿ ಪದವಿ ಹೊಂದಿದ 10 ಸಹಾಯಕ ಪ್ರಾಧ್ಯಾಪಕರುಗಳಿಗೆ ನೇಮಕಾತಿ ಹೊಂದಿದ ದಿನಾಂಕದಿಂದ ಅನ್ವಯವಾಗುವಂತೆ 05ನಾನ್ ಕಾಂಪೌಂಡೆಡ್ ಅಡ್ವಾನ್ಸ್ ಇಂಕ್ರಿಮೆಂಟ್, ನೇಮಕಾತಿ ನಂತರ ಪಿಹೆಚ್.ಡಿ ಪದವಿ ಹೊಂದಿದ 10 ಸಹಾಯಕ ಪ್ರಾಧ್ಯಾಪಕರುಗಳಿಗೆ ಪಿಹೆಚ್.ಡಿ ಪದವಿ ಪಡೆದು ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ 03 ನಾನ್ ಕಾಂಪೌಂಡೆಡ್ ಅಡ್ವಾನ್ಸ್ ಇಂಕ್ರಿಮೆಂಟ್ ಮತ್ತು ಎಂ.ಫಿಲ್ ಪದವಿ ಪಡೆದ 08 ಸಹಾಯಕ ಪ್ರಾಧ್ಯಾಪಕರುಗಳಿಗೆ ರವರುಗಳಿಗೆ 02 ನಾನ್ ಕಾಂಪೌಂಡೆಡ್ ಅಡ್ವಾನ್ಸ್ ಇಂಕ್ರಿಮೆಂಟ್‌ಗಳ ಸೌಲಭ್ಯಗಳನ್ನು ದಿನಾಂಕ: 28.10.2022ರ ಆದೇಶದಲ್ಲಿ ವಿಶ್ವವಿದ್ಯಾನಿಲಯವು ಬಿಡುಗಡೆಗೊಳಿಸಲಾಗಿರುತ್ತದೆ.

**ಈ ಸಂದರ್ಭಕ್ಕೆ ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಇವರು ಪತ್ರ ಸಂಖ್ಯೆ: ಇಡಿ 75 ಯುಎನ್‌ಇ 2021 ದಿನಾಂಕ: 04.01.2023ರಂದು ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ವರದಿಯಲ್ಲಿನ ಆಕ್ಷೇಪಿತ ಕಂಡಿಕೆ 4.1.3.1(ಎ) ರಲ್ಲಿ 22 ಮಂದಿ ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿ ಬಗ್ಗೆ ಪರಿನಿಯಮ ರಚಿಸಿದ, ವೇತನ ವಿಸ್ತರಣೆಗೊಳಿಸಿದ ಕುಲಪತಿಗಳು, ಕುಲಸಚಿವರು, ಹಣಕಾಸು ಅಧಿಕಾರಿಗಳು ಮತ್ತು ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆ ಶಿಸ್ತು ಕ್ರಮ ಕೈಗೊಂಡು, ವಿಶ್ವವಿದ್ಯಾನಿಲಯಕ್ಕೆ ಉಂಟಾದ ಆರ್ಥಿಕ ನಷ್ಟ ವಸೂಲಾತಿ ಬಗ್ಗೆ ಸದರಿಯವರುಗಳ ವಿರುದ್ಧ ಸಿವಿಲ್ ದಾವೆ ಹೂಡಿ ಕೈಗೊಂಡ ಕ್ರಮದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಿರುತ್ತಾರೆ.**

**ಸದರಿ ಸರ್ಕಾರದ ಪತ್ರಕ್ಕೆ ಕ್ರಮವಹಿಸುವ ಸಂಬಂಧದಲ್ಲಿ ಕಡತಗಳನ್ನು ಪರಿಶೀಲಿಸಿ ವರದಿ ನೀಡಲು ಪ್ರೊ. ಎಸ್. ಕೃಷ್ಣವೇಣಿ, ಪ್ರಾಧ್ಯಾಪಕರು, ಭೌತಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಇವರನ್ನು ಒಳಗೊಂಡಂತೆ ಸಮಿತಿಯನ್ನು ರಚಿಸಿದ್ದು, ಸದರಿಯವರು ಕಡತಗಳನ್ನು ಹಾಗೂ ದಾಖಲೆಗಳನ್ನು ಪರಿಶೀಲಿಸಿ, ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ.**

ಆದ್ದರಿಂದ, "KSOU (Creation of Posts & Absorption of Temporary Teachers) – Statutes 2012 ಪರಿನಿಯಮದ ಮೂಲಕ ಸೃಜನೆಗೊಂಡು ಖಾಯಂ ಆಗಿರುವ 22 ಉಪನ್ಯಾಸಕರುಗಳ ಬಗ್ಗೆ ಡಾ. ಕೆ. ಭಕ್ತವತ್ಸಲ ಏಕಸದಸ್ಯ ಸತ್ಯಶೋಧನಾ ಸಮಿತಿಯು ನೀಡಿದ ವರದಿಯ ಅನ್ವಯ, ಘನತೆವೆತ್ತ ಕುಲಾಧಿಪತಿಗಳು "Steps may be taken to discharge them forthwith" ಎಂದು ನೀಡಿದ್ದ ನಿರ್ದೇಶನದಂತೆ, ವಿಶ್ವವಿದ್ಯಾನಿಲಯವು ಸದರಿಯವರುಗಳಿಗೆ "ಷೋಕಾಸ್ ನೋಟೀಸ್" ಜಾರಿಮಾಡಿದ್ದು, ಸದರಿ ಷೋಕಾಸ್ ನೋಟೀಸ್ ಅನ್ನು ರದ್ದುಪಡಿಸುವಂತೆ ಮತ್ತು ಇತರೆ ಸೌಲಭ್ಯಗಳಿಗೆ ಆದೇಶ ಕೋರಿ ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರು, ಇಲ್ಲಿ ಸದರಿ ಸಹಾಯಕ ಪ್ರಾಧ್ಯಾಪಕರುಗಳು ರಿಟ್ ಪ್ರಕರಣಗಳನ್ನು ದಾಖಲಿಸಿದ್ದು, ಸದರಿ ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:09.09.2019ರಂದು "......Both parties maintain status quo...." ಎಂದು ಆದೇಶ ಹೊರಡಿಸಿದಾಗ್ಯೂ ಮತ್ತು ಭಾರತೀಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ (A.G.Audit) ಮತ್ತು ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ

ಕುಲಪತಿಗಳು ಕುಲಸಚಿವರು

ಪತ್ರ ಇಲಾಖೆಯು (Vigilence Audit) ಇವರು ಲೆಕ್ಕ ತಪಾಸಣೆ ಮಾಡಿ ಸದರಿ ಅಧ್ಯಾಪಕರುಗಳ ನೇಮಕಾತಿ ಹಾಗೂ ಅವರುಗಳಿಗೆ ನೀಡಿರುವ ಆರ್ಥಿಕ ಸೌಲಭ್ಯಗಳು ಕಾನೂನು ಬಾಹಿರವಾಗಿರುತ್ತದೆ ಎಂದು ಆಕ್ಷೇಪಿಸಿ, ಅವುಗಳನ್ನು ಹಿಂಪಡೆಯುವಂತೆ ವರದಿ ಸಲ್ಲಿಸಿದ್ದು, ಸದರಿ ವಿಷಯವು ಕರ್ನಾಟಕ ವಿಧಾನ ಮಂಡಲದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯಲ್ಲಿ ಚರ್ಚಿತಗೊಂಡು, ಸದರಿ ಸಮಿತಿಯು ದಿನಾಂಕ: 14.12.2021ರಂದು " ಸದರಿ ಅಧ್ಯಾಪಕರುಗಳನ್ನು ಸೇವೆಯಿಂದ ವಜಾಗೊಳಿಸುವಂತೆ" ಶಿಫಾರಸ್ಸು ಮಾಡಿದ್ದಾಗ್ಯೂ ಸಹ ವಿಶ್ವವಿದ್ಯಾನಿಲಯವು ಮೇಲ್ಕಂಡ 21 ಸಹಾಯಕ ಪ್ರಾಧ್ಯಾಪಕರುಗಳಿಗೆ ಮೇಲ್ಕಂಡ ಕ್ರಮ ಸಂಖ್ಯೆ (A) ಮತ್ತು (B) ಆರ್ಥಿಕ ಸೌಲಭ್ಯಗಳನ್ನು ವಿಸ್ತರಿಸಿ ಬಿಡುಗಡೆಗೊಳಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ 21 ಸಹಾಯಕ ಪ್ರಾಧ್ಯಾಪಕರುಗಳಿಗೆ

1. ದಿನಾಂಕ: 01.01.2016 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ ತಡೆಹಿಡಿಯಲಾಗಿದ್ದ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ಬಿಡುಗಡೆಗೊಳಿಸಿರುವ ಕ್ರಮದ ಬಗ್ಗೆ
2. ಸದರಿ ಸಹಾಯಕ ಪ್ರಾಧ್ಯಾಪಕರುಗಳಿಗೆ ತುಟ್ಟಿ ಭತ್ಯೆ ಮತ್ತು ವಾರ್ಷಿಕ ವೇತನ ಬಡ್ತಿ ಬಿಡುಗಡೆಗೊಳಿಸುವ ಬಗ್ಗೆ
3. ಸರ್ಕಾರದ ದಿನಾಂಕ: 04.01.2023ರ ಪತ್ರದಲ್ಲಿ ನಿರ್ದೇಶಿಸಿರುವಂತೆ ಕ್ರಮ ಕೈಗೊಳ್ಳಲು ಸಮಿತಿಯನ್ನು ರಚಿಸಿದ್ದು, ಸದರಿ ಪರಿಶೀಲನಾ ಸಮಿತಿಯ ಶಿಫಾರಸ್ಸಿನನ್ವಯ ಕಾನೂನಾತ್ಮಕ ಕ್ರಮ ತೆಗೆದುಕೊಳ್ಳುವ ಬಗ್ಗೆ

ಮೇಲಿನ ಮೂರು ಅಂಶಗಳ ಕುರಿತು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

************

ಕುಲಸಚಿವರು ಮಾತನಾಡಿ, ಸದರಿ ವಿಷಯದ ಬಗ್ಗೆ 21 ಸಹಾಯಕ ಪ್ರಾಧ್ಯಾಪಕರುಗಳಿಗೆ ತಡೆಹಿಡಿಯಲಾಗಿದ್ದ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು, ತುಟ್ಟಿಭತ್ಯೆ ಮತ್ತು ವಾರ್ಷಿಕ ವೇತನದ ಬಡ್ತಿಯನ್ನು ಬಿಡುಗಡೆಗೊಳಿಸಿರುವುದಾಗಿ ಮತ್ತು ಪರಿಶೀಲನಾ ಸಮಿತಿಯ ಶಿಫಾರಸ್ಸಿನನ್ವಯ ಕಾನೂನಾತ್ಮಕವಾಗಿ ಕ್ರಮ ಕೈಗೊಳ್ಳಲು ಮಂಡಿಸಿರುವುದಾಗಿ ಪ್ರಸ್ತಾಪಿಸಿದರು.

ಶ್ರೀಮತಿ ಉಮಾ.ಕೆ., ಉಪಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು, ಮತ್ತು ಶ್ರೀ ನಂದಕುಮಾರ್ ಬಿ., ಉಪಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬೆಂಗಳೂರು, ಇವರುಗಳು ಪ್ರಸ್ತಾವನೆಯನ್ನು ಸುದೀರ್ಘವಾಗಿ ಪರಿಶೀಲಿಸಿ, ಮಾನ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಜಸ್ಟೀಸ್ ಡಾ. ಕೆ. ಭಕ್ತವತ್ಸಲ ಇವರು "KSOU (Creation of Posts & Absorption of Temporary Teachers) – Statutes 2012 ಪರಿನಿಯಮದನ್ವಯ 22 ಸಹಾಯಕ ಪ್ರಾಧ್ಯಾಪಕರುಗಳ ನೇಮಕಾತಿಗೆ ಸಂಬಂಧಿಸಿದಂತೆ "Statute is Illegal" ಎಂದು ವರದಿ ಸಲ್ಲಿಸಲಾಗಿದ್ದು, ಸದರಿ ಸಹಾಯಕ ಪ್ರಾಧ್ಯಾಪಕರುಗಳಿಗೆ **'ಷೋಕಾಸ್ ನೋಟೀಸ್'**ನ ನೀಡಿದ್ದರಿಂದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪ್ರಕರಣಗಳನ್ನು WP.No.36509-36527/2019, WP.No.51877/2019 & WP.No.49437/2019 ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 09.09.2019 ರಂದು "...... Both parties maintain status quo......" ಎಂದು ಆದೇಶಿಸಿರುತ್ತದೆ. ಈ ಹಿಂದೆ ಮಾನ್ಯ ಉಚ್ಚ ನ್ಯಾಯಾಲಯವು maintain status quo ಎಂದು ಆದೇಶಿಸಿರುವ ಹಿನ್ನೆಲೆಯಲ್ಲಿ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿರುವುದು ನಿಯಮಬಾಹಿರವೆಂದು, ಎಲ್ಲಾ "decisions ಗಿಂತ court order is above " ಎಂದು ತಿಳಿಸಿ, 22 ಸಹಾಯಕ ಪ್ರಾಧ್ಯಾಪಕರುಗಳು 2016 ರ ಪೂರ್ವದಲ್ಲಿ ಪಡೆಯುತ್ತಿದ್ದ ವೇತನ ಮತ್ತು ಇತರೆ ಭತ್ಯೆಗಳನ್ನು ಯಥಾಸ್ಥಿತಿ ಮುಂದುವರಿಸುವಂತೆ ತಿಳಿಸಿದರು.

*******

ಕುಲಪತಿಗಳು ಕುಲಸಚಿವರು

ತೀರ್ಮಾನ :

ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, 22 ಸಹಾಯಕ ಪ್ರಾಧ್ಯಾಪಕರುಗಳಿಗೆ ತಡೆಹಿಡಿಯಲಾಗಿದ್ದ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು, ತುಟ್ಟಿಭತ್ಯೆ ಮತ್ತು ವಾರ್ಷಿಕ ವೇತನದ ಬಡ್ತಿಯನ್ನು ಬಿಡುಗಡೆಗೊಳಿಸಲಾಗಿತ್ತು. ಈ ಹಿಂದೆ ವಿಶ್ವವಿದ್ಯಾನಿಲಯವು ದಿನಾಂಕ:06.02.2019ರಂದು ನೀಡಲಾಗಿದ್ದ **'ಷೋಕಾಸ್ ನೋಟೀಸ್'**ನ ನಂತರ **ಸದರಿ ಪ್ರಾಧ್ಯಾಪಕರುಗಳು** ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪ್ರಕರಣಗಳನ್ನು WP.No.36509-36527/2019, WP.No.51877/2019 & WP.No.49437/2019 ದಾಖಲಿಸಿದ್ದು, **ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 09.09.2019 ರಂದು "...... Both parties maintain status quo......" ಎಂದು ಆದೇಶಿಸಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿರುವುದು ನಿಯಮಬಾಹಿರವೆಂದು ತಿಳಿಸಿ, 22 ಸಹಾಯಕ ಪ್ರಾಧ್ಯಾಪಕರುಗಳಿಗೆ 2016 ರ ಪೂರ್ವದಲ್ಲಿ ಪಡೆಯುತ್ತಿದ್ದ ವೇತನ ಮತ್ತು ಇತರೆ ಭತ್ಯೆಗಳನ್ನು ಯಥಾಸ್ಥಿತಿ ಮುಂದುವರಿಸುವಂತೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

*******

**ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ವಿಷಯಗಳು:**

1. 2013–14, 2014–15 ನೇ ಶೈಕ್ಷಣಿಕ ಸಾಲುಗಳಲ್ಲಿ ಪಿಹೆಚ್.ಡಿ ಗೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ರದ್ದು ಪಡಿಸಿರುವುದರ ಕುರಿತು: –

ಮಾನ್ಯ ಕುಲಪತಿಗಳು ಮಾತನಾಡಿ, ಸದರಿ ಪಿಹೆಚ್.ಡಿ ವಿದ್ಯಾರ್ಥಿಗಳಿಗೆ 2019 ನೇ ಶೈಕ್ಷಣಿಕ ಸಾಲಿನಲ್ಲಿ ನೂತನವಾಗಿ ಪ್ರವೇಶ ಪರೀಕ್ಷೆಯನ್ನು ನಡೆಸಿ, ಸಂದರ್ಶನವನ್ನು ಮಾಡಿ ಸಾಮಾನ್ಯ ಪ್ರವೇಶಾತಿಯನ್ನು ಮಾಡಲಾಗಿದ್ದು, ಸದರಿ ವಿದ್ಯಾರ್ಥಿಗಳು ಮೂರು ವರ್ಷಗಳ ಕಾಲ ಸಂಶೋಧನಾ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಇವರ ಪ್ರವೇಶಾತಿಯನ್ನು ಖಾಯಂ ನೋಂದಣಿಯಾಗಿ ಪರಿಗಣಿಸಿದ್ದು, thesis ಅನ್ನು ಸಲ್ಲಿಸಿದ ನಂತರದಲ್ಲಿ ಅವರು ಪದವಿಯನ್ನು ಪಡೆಯಲು ಅರ್ಹರಾಗಿದ್ದು, ಮುಂಬರುವ ಘಟಿಕೋತ್ಸವದಲ್ಲಿ Ph.D ಪದವಿಯನ್ನು ಪ್ರಧಾನ ಮಾಡಲಾಗುವುದು ಎಂದು ತಿಳಿಸಿದರು.

ಕುಲಪತಿಗಳು

ಕುಲಸಚಿವರು

ತೀರ್ಮಾನ :

ಸದರಿ ವಿಷಯದ ಬಗ್ಗೆ ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿ, 2019 ನೇ ಶೈಕ್ಷಣಿಕ ಸಾಲಿನಲ್ಲಿ ನೂತನವಾಗಿ ಪ್ರವೇಶ ಪಡೆದಿರುವ Ph.D ವಿದ್ಯಾರ್ಥಿಗಳಿಗೆ ಮುಂಬರುವ ಘಟಿಕೋತ್ಸವದಲ್ಲಿ ಪದವಿಯನ್ನು ಪ್ರಧಾನ ಮಾಡಲು ಸಮಿತಿಯು ಒಮ್ಮತದಿಂದ ಒಪ್ಪಿಗೆ ನೀಡಿತು.

******

**2. ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ಹಾಗೂ ಇತರೆ ತತ್ಸಮಾನ ವೃಂದದವರಿಗೆ ವೃತ್ತಿ ಪದೋನ್ನತಿ ಯೋಜನೆಯಡಿ ಪದೋನ್ನತಿ (CAS) ನೀಡುವ ಸಂಬಂಧ "Screening-cum-Evaluation Committee and Selection Committee" ಯ ವಿಷಯ ತಜ್ಞರ ಪಟ್ಟಿಯನ್ನು ಅನುಮೋದನೆಗಾಗಿ ಮತ್ತು ಸದರಿ ಸಮಿತಿಗಳ ವಿಷಯ ತಜ್ಞರಿಗೆ, ಸದಸ್ಯರುಗಳಿಗೆ ಮತ್ತು ಅರ್ಜಿ ಪರಿಶೀಲನಾ ಸಮಿತಿ ಸದಸ್ಯರಿಗೆ ಭತ್ಯೆಗಳನ್ನು ಪಾವತಿಸುವ ಬಗೆಗೆ:**

******

ಕುಲಸಚಿವರು ಮಾತನಾಡಿ, ವಿ.ವಿ. ಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರು ಹಾಗೂ ಇತರೆ ತತ್ಸಮಾನ ವೃಂದದವರಿಗೆ ವೃತ್ತಿ ಪದೋನ್ನತಿ ಯೋಜನೆಯಡಿ (CAS) ಮುಂದಿನ ಹಂತದ ಪದೋನ್ನತಿಗಾಗಿ ಅರ್ಜಿ ಸಲ್ಲಿಸುವ ಸಂಬಂಧ ದಿನಾಂಕ: 06–12–2021 ಮತ್ತು 30–05–2023 ರಂದು ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ. ವಿಶ್ವವಿದ್ಯಾನಿಲಯದ ಅರ್ಹ ಅಧ್ಯಾಪಕರುಗಳು ವಿವಿಧ ಹಂತಗಳ ಪದೋನ್ನತಿಗಾಗಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಅಧ್ಯಾಪಕರುಗಳಿಗೆ CAS Scheme ನಲ್ಲಿ ಪದೋನ್ನತಿ ನೀಡಬೇಕಾಗಿದ್ದು, ಈ ಸಂಬಂಧ "Screening-cum-Evaluation Committee and Selection Committee" ಯನ್ನು ರಚಿಸಬೇಕಾಗಿರುತ್ತದೆ.

ಮುಂದುವರೆದು, ಸಹಾಯಕ ಪ್ರಾಧ್ಯಾಪಕರುಗಳಿಗೆ (Academic Level-11 to Academic Level-12) ನೀಡುವ ಸಂಬಂಧ "Screening-cum-Evaluation Committee" ಯನ್ನು ರಚಿಸಬೇಕಾಗಿದ್ದು ಸದರಿ ಸಮಿತಿಯು ಈ ಕೆಳಕಂಡವರುಗಳನ್ನು ಒಳಗೊಂಡಿರುತ್ತದೆ.

1. The Vice Chancellor or his/her nominee shall be the Chairperson of the committee.
2. Dean of the faculty, wherever applicable, if not available he/she may be co-opted from sister University.
3. The head of the department/ Chairperson of the school. If he/she is not of Professor rank may be co-opted from sister University; and
4. One subject expert in the subject concerned nominated by the Vice Chancellor from the University panel of experts.

ಕುಲಪತಿಗಳು

ಕುಲಸಚಿವರು

ಸಹ ಪ್ರಾಧ್ಯಾಪಕರುಗಳಿಗೆ (Academic Level-12 to Academic Level-13A) ಹಾಗೂ ಪ್ರಾಧ್ಯಾಪಕ (Academic Level-13A to Academic Level-14) ಪದೋನ್ನತಿ ನೀಡುವ ಸಂಬಂಧ "Selection Committee" ಯನ್ನು ರಚಿಸಬೇಕಾಗಿದ್ದು, ಸದರಿ ಸಮಿತಿಯು ಈ ಕೆಳಕಂಡವರುಗಳನ್ನು ಒಳಗೊಂಡಿರುತ್ತದೆ.

1. The Vice Chancellor shall be the Chairperson of the committee.
2. An academician not below the rank of Professor to be nominated by the visitor/Chancellor, wherever applicable.
3. Three experts in the subject/field concerned to be nominated by the Vice Chancellor out of the panel of names approved by the relevant statutory body of the University concerned.
4. Dean of the faculty wherever applicable. If not applicable he/she may be co-opted from sister University.
5. The head of the department/ Chairperson of the school. If he/she is not of Professor rank may be co-opted from sister University.
6. An academician of Professor rank belonging to the SC/ST/OBC/Minority/Women/Differently-abled categories, if any of the candidate representing these categories is the applicant, if any of the candidate representing these categories is the applicant to be nominated by the Vice chancellor, if any of the above members of the selection committee does not belong to that category.
7. At least four members, including two outside subject experts, shall constitute the quorum.

ಕರಾಮುವಿ ಪರಿನಿಯಮ–1994 ಎರಡನೇ ಅನುಸೂಚಿ 12(2)(vii) ರನ್ವಯ " ಕುಲಸಚಿವರು ನೇಮಕಾತಿ ಮಂಡಳಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸತಕ್ಕದ್ದು" ಎಂದಿರುತ್ತದೆ. ಕ್ರಮ ಸಂಖ್ಯೆ 3ರ ಪ್ರಕಾರವಾಗಿ "Selection Committee" ಯಲ್ಲಿನ ವಿಷಯ ತಜ್ಞರ ಪಟ್ಟಿಯನ್ನು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯಲು, ಅಧ್ಯಾಕಪರುಗಳಿಗೆ/ ತತ್ಸಮಾನ ವೃಂದದವರಿಗೆ ವೃತ್ತಿ ಪದೋನ್ನತಿ ಯೋಜನೆಯಡಿಯಲ್ಲಿ ಪದೋನ್ನತಿ ನೀಡಲು "Screening-cum-Evaluation Committee and Selection Committee" ಯನ್ನು ರಚಿಸಬೇಕಾಗಿರುತ್ತದೆ.

ಮುಂದುವರೆದು, ಅರ್ಜಿ ಪರಿಶೀಲನಾ ಸಮಿತಿ ಸದಸ್ಯರಿಗೆ ಕಿ.ಮಿ.ಗೆ ರೂ 8/– ರಂತೆ ಪ್ರಯಾಣ ಭತ್ಯೆ, ಉಪಸ್ಥಿತಭತ್ಯೆ ರೂ. 2000/–ಗಳನ್ನು ಮತ್ತು ಸ್ಥಳೀಯಭತ್ಯೆ ರೂ. 300/– ಗಳನ್ನು ಪಾವತಿಸಲು ತದನಂತರ, "Screening-cum-Evaluation Committee" and "Selection Committee" ಯ ವಿಷಯ ತಜ್ಞರಿಗೆ, ಕಿ.ಮಿ.ಗೆ ರೂ.12/– ರಂತೆ ಪ್ರಯಾಣ ಭತ್ಯೆ, ಉಪಸ್ಥಿತಭತ್ಯೆ ರೂ. 2000/–ಗಳನ್ನು ಮತ್ತು ಸ್ಥಳೀಯಭತ್ಯೆ ರೂ. 300/– ಗಳನ್ನು ಪಾವತಿಸಬೇಕಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

******

ಕುಲಪತಿಗಳು

ಕುಲಸಚಿವರು

ತೀರ್ಮಾನ:

**ಕೂಲಂಕಷವಾಗಿ ಚರ್ಚಿಸಿದ ಸಭೆಯು, ವಿ.ವಿ. ನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳಿಗೆ ಹಾಗೂ ಇತರೆ ತತ್ಸಮಾನ ವೃಂದದವರಿಗೆ ವೃತ್ತಿ ಪದೋನ್ನತಿ ಯೋಜನೆಯಡಿ (CAS) ಪದೋನ್ನತಿ ನೀಡುವ ಸಂಬಂಧ "Screening-cum-Evaluation Committee" and "Selection Committee" ಯ ವಿಷಯ ತಜ್ಞರ ಪಟ್ಟಿಯನ್ನು ಅನುಮೋದಿಸಿ ಮುಂದಿನ ಕ್ರಮಕೈಗೊಳ್ಳಲು ಹಾಗೂ ಸದರಿ ಸಮಿತಿಗಳ ವಿಷಯ ತಜ್ಞರಿಗೆ, ಸದಸ್ಯರುಗಳಿಗೆ ಮತ್ತು ಅರ್ಜಿ ಪರಿಶೀಲನಾ ಸಮಿತಿ ಸದಸ್ಯರಿಗೆ ಪ್ರಸ್ತಾಪಿಸಿರುವ ಭತ್ಯೆಗಳನ್ನು ಪಾವತಿಸಲು ಸರ್ವಾನುಮತದಿಂದ ಒಪ್ಪಿಗೆ ನೀಡಿತು.**

*****

3. ವಿ. ವಿ ನಿಲಯದ ವತಿಯಿಂದ ಗೌರವ ಡಾಕ್ಟರೇಟ್ (Doctor of Literature- D.Litt.) ಪ್ರಶಸ್ತಿ ನೀಡಲು ಗಣ್ಯ ವ್ಯಕ್ತಿಗಳ ಹೆಸರುಗಳನ್ನು ಸೂಚಿಸುವುದರ ಕುರಿತು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 18 ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ದಿನಾಂಕ 02.07.2023 ರಂದು ಭಾನುವಾರ ನಡೆಸಲು ನಿಗದಿಪಡಿಸಿದ್ದು, ಘಟಿಕೋತ್ಸವ ಮುಖ್ಯ ಭಾಷಣ ಮಾಡಲು ಗೌರವಾನ್ವಿತ ಶ್ರೀ ಅಶೋಕ್ ಎಸ್. ಕಿಣಗಿ, ನ್ಯಾಯಾಧೀಶರು, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು ಇವರನ್ನು ಆಹ್ವಾನಿಸಲಾಗಿದೆ.

ಸದರಿ ಘಟಿಕೋತ್ಸವದಲ್ಲಿ ಮಾನವಿಕ, ಸಾಮಾಜಿಕ, ವಿಜ್ಞಾನ, ಔದ್ಯೋಗಿಕ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ/ಸೇವೆಗೈದ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ (Doctor of Literature- D.Litt.) ಪ್ರಶಸ್ತಿ ನೀಡುವ ಸಲುವಾಗಿ ಪ್ರಶಸ್ತಿಗೆ ಅರ್ಹರಾಗುವ ಹೆಸರುಗಳನ್ನು ಸೂಚಿಸಲು ವಿಶೇಷ ಸಭೆಯನ್ನು ಕರೆಯಲಾಗಿದೆ. ಸಭೆಯಲ್ಲಿ ಆಯ್ಕೆ ಮಾಡಿದ ವ್ಯಕ್ತಿಗಳ ಹೆಸರುಗಳನ್ನು "ಪರಿಶೀಲನಾ ಸಮಿತಿ"ಯ ಮುಂದೆ ಮಂಡಿಸಬೇಕಾಗಿರುತ್ತದೆ. ಪರಿಶೀಲನಾ ಸಮಿತಿಯು ಶಿಫಾರಸ್ಸು ಮಾಡುವ ಗರಿಷ್ಠ ಮೂರು ಮಂದಿಯ ಹೆಸರುಗಳನ್ನು ಅಂತಿಮಗೊಳಿಸಲು ಘನತವೆತ್ತ ಕುಲಾಧಿಪತಿಗಳಿಗೆ ಸಲ್ಲಿಸಬೇಕಾಗಿರುತ್ತದೆ. ಆದುದರಿಂದ, ಮೇಲ್ಕಂಡ ಅಂಶಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಿದೆ.

********

ತೀರ್ಮಾನ:

**ಸದರಿ ಸಮಿತಿಯ ಸದಸ್ಯರು 18 ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಘಟಿಕೋತ್ಸವ ಮುಖ್ಯ ಭಾಷಣ ಮಾಡಲು ಗೌರವಾನ್ವಿತ ಶ್ರೀ ಅಶೋಕ್ ಎಸ್. ಕಿಣಗಿ, ನ್ಯಾಯಾಧೀಶರು, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು ಇವರನ್ನು ಆಹ್ವಾನಿಸಲು ಮತ್ತು ಘಟಿಕೋತ್ಸವದಲ್ಲಿ ಮಾನವಿಕ, ಸಾಮಾಜಿಕ, ವಿಜ್ಞಾನ, ಔದ್ಯೋಗಿಕ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ/ಸೇವೆಗೈದ ವ್ಯಕ್ತಿಗಳಿಗೆ ಗೌರವ ಡಾಕ್ಟರೇಟ್ (Doctor of Literature- D.Litt.) ಪ್ರಶಸ್ತಿ ನೀಡುವ ಸಲುವಾಗಿ ಪ್ರಶಸ್ತಿಗೆ ಅರ್ಹರಾಗುವ ಹೆಸರುಗಳನ್ನು ಸೂಚಿಸಲು"ಪರಿಶೀಲನಾ ಸಮಿತಿ"ಯ ಮುಂದೆ ಮಂಡಿಸಿ ಸಮಿತಿಯು ಶಿಫಾರಸ್ಸು ಮಾಡುವ ಗರಿಷ್ಠ ಮೂರು ಮಂದಿಯ ಹೆಸರುಗಳನ್ನು ಅಂತಿಮಗೊಳಿಸಿ ಘನತವೆತ್ತ ಕುಲಾಧಿಪತಿಗಳಿಗೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ಅನುಮತಿ ನೀಡಿತು.**

******

**ಕುಲಪತಿಗಳು** **ಕುಲಸಚಿವರು**

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 172ನೇ ಸಾಮಾನ್ಯ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕುಲಪತಿಗಳು** | **ಕುಲಸಚಿವರು**